JANUARY 2018

Azim Premji Foundation

FA TALKIES

EXPLORING THE VOICES UNHEARD

ಸಂಚಿಕೆ 14 ISSUE 14

SPECIAL EDITION

ಹೊಸ ರೂಪು-ಅದೇ ಹುರುಪು..!

ಎಲ್ಲರಿಗೂ ಮಕರ ಸಂಕ್ರಾಂತಿಯ ಶುಭಾಷಯಗಳು!
ಹಳೆ ಕ್ಯಾಲೆಂಡರ್ ಬದಲಾಯಿಸುವ ಈ ತಿಂಗಳಲ್ಲಿ ಹೊಸ ಚಿಂತನೆ, ಖುಷಿಗಳು, ರಸ-ರುಚಿಗಳನ್ನು ಹೊತ್ತು ತರುತ್ತಿರುವ ಹೊಸ ತಂಡ ಬಯಲೊಳಗಿನ ಫಟಾಕಿ ಸದ್ದು ನಿಲ್ಲದೇ, ಮತ್ತಷ್ಟು ಹೆಚ್ಚಿಸುವ ಭರವಸೆಯೊಂದಿಗೆ ನಿಮ್ಮ ಎದುರಿಗೆ ಈ ವಿಶೇಷ ಸಂಚಿಕೆಯನ್ನು ಇರಿಸಿದೆ. ಹೊಸದೊಂದು ಕೆಲಸದಾರಂಭ ಯಾವಾಗಲೂ ಸಣ್ಣ ಖುಷಿಯೊಂದಿಗೆ ಆತಂಕವನ್ನು ಉಳಿಸಿರುತ್ತದೆ. ಮುನ್ನಡೆಸುವ, ನಿಲ್ಲದಂತೆ ನಡೆಸುವ, ನಿರೀಕ್ಷೆಗಳನ್ನು ತಲುಪುವ ಆತಂಕ. ಆದರೆ ಒಂದರ್ಥದ ಸಾರ್ಥಕತೆಯೊಂದಿಗೆ, ಸಮರ್ಪಣಾ ಭಾವದೊಂದಿಗೆ ಇಲ್ಲಿವರೆಗೆ ಬಂದಿದ್ದೇವೆ. ಅದಕ್ಕೆ ಕಾರಣ ಪೆರಿಯವರು, ನಮ್ಮೆಲ್ಲಾ ಓದುಗರು, ಬರಹಗಾರರು, ಕಲಾವಿದರು, ಬಯಲು ತಂಡದ ಸಲಹೆಗಾರರು. ಹಾಗೆಯೇ ನಮ್ಮ ತಂಡದೊಳಗಿದ್ದ ಸರಳತೆ, ಸಂಪನ್ನತೆ, ಸಹಕಾರ, ಸಹನೋಟ, ಸಹಯಾನ, ಸಜೀವತೆಯ ಜೀವಂತಿಕೆಗಳೂ ಅಷ್ಟೇ ಕಾರಣವಾಗಿವೆ. ನಮ್ಮ ಹಳೆಯ ತಂಡ ಮೂರ್ನಾಲ್ಕು ಸಂಚಿಕೆಗಳ ಗುರಿಯನ್ನಿಟ್ಟುಕೊಂಟು ಈ ಕೆಲಸಕ್ಕೆ ಕೈ ಹಾಕಲಿಲ್ಲ, ಅಸಂಖ್ಯಾತ ಸಂಚಿಕೆಗಳೇ ನಮ್ಮ ತಂಡದ ಗುರಿಯಾಗಿತ್ತು. ಅದು ಸಾಧ್ಯವಾಗಿದೆ, ಮುಂದುವರಿಯಬೇಕಿದೆ. ಸಾಗಿಬಂದ ದಾರಿ ಸವಾಲಿನದ್ದು ಹೌದು, ಸಂತೃಪ್ತಿಯದ್ದು ಹೌದು.

ಇದೀಗ ಒಂದಷ್ಟು ಬದಲಾವಣೆಗಳೊಂದಿಗೆ, ಯುವತನ, ಹೊಸತನದಿಂದ ಕೂಡಿದ ಫ-ಟಾಕೀಸ್ ನಿಮ್ಮ ಮುಂದಿದೆ. ಮಂಡ್ಯದಿಂದ ಪ್ರೀತಿ ಪೊನ್ನಪ್ಪ, ಬೆಂಗಳೂರಿನಿಂದ ಚಿಕ್ಕವೀರೇಶ್, ವಿಜಯಪುರದಿಂದ ಸುನೀಲ್ ಪವಾರ್, ಬಾಗಲಕೋಟೆಯಿಂದ ಹರೀಶ್, ಕೊಪ್ಪಳದಿಂದ ಕೃತಿ ಸತೀಶ್ ಹಾಗೂ ಬಳ್ಳಾರಿಯಿಂದ ರಜನಿ ಭಟ್ ಮತ್ತು ಅವಿನಾಶ್‌ರವರು ಮುಂದಿನ ಸಂಚಿಕೆಗಳ ಹೊಣೆ ಹೊತ್ತಿದ್ದಾರೆ.

ಇದುವರೆಗೂ, ಅಂದರೆ 13ನೇ ಸಂಚಿಕೆಯವರೆಗೆ, ನಮ್ಮ ತಂಡ ಬಯಲು ವಿಶೇಷ ಸಂಚಿಕೆಗಾಗಿ ಕೆಲಸ ಮಾಡಿದ ಅಗಸ್ಟ್ ತಿಂಗಳು ಹೊರತುಪಡಿಸಿ, ಕಥೆ, ಕವನ, ಲೇಖನ, ಚುಟುಕು, ಚಿತ್ರಗಳನ್ನೊಳಗೊಂಡಂತೆ ವೈವಿಧ್ಯಮಯ ಸುಮಾರು 214 ಕೊಡುಗೆಗಳನ್ನು ನೀಡಿದ ನಿಮ್ಮೆಲ್ಲರಿಗೂ ಧನ್ಯವಾದಗಳು. ತರಗತಿ ಕೋಣೆ, ಆಟದ ಮೈದಾನ, ಓದಿದ ಪುಸ್ತಕ, ಸುತ್ತಿದ ಊರು, ಪ್ರೇರೇಪಣೆ, ಸ್ಥಳ ಪರಿಚಯ, ಸಂಸ್ಕೃತಿ ಪರಿಚಯ, ಹೋರಾಟ, ಒಡನಾಟ, ಹಾಸ್ಯ, ಕಂಡ ಕನಸು, ಉಂಡ ಊಟ, ಸುಖ-ದುಃಖಗಳ ಅನುಭವ, ಚಿಂತನೆಗಳು, ವಿಜ್ಞಾನ, ಗಣಿತ, ಭಾಷೆ, ಸಮಾಜ, ಹೀಗೆ ಎಲ್ಲಾ ರೀತಿಯ ವಿಷಯಗಳನ್ನು ನಿಮ್ಮ ಫಟಾಕೀಸ್‌ನ ಮೂಲಕ ಕೆಲವರಿಂದ ಪಡೆದು, ಹಲವರಿಗೆ ಹಂಚುವ ಕಾರ್ಯವಾಗಿದ್ದು ಸಂತಸ ತಂದಿದೆ. ಮುಂದಿನ ಸಂಚಿಕೆಗಳಲ್ಲಿ ಹೆಚ್ಚಿನ ಸಂಖ್ಯೆಗಳಲ್ಲಿ ನಿಮ್ಮ ಕೊಡುಗೆಗಳನ್ನು ನೀಡಿ ಹೊಸ ತಂಡವನ್ನು ಹುರಿದುಂಬಿಸಬೇಕೆಂದು ಕೋರಿಕೆ. ನಿಮ್ಮ ಹಿಮ್ಮಾಹಿತಿ, ಸಲಹೆ-ಸಹಕಾರಗಳು ನಮ್ಮಲ್ಲಿ ಉತ್ಸಾಹ ತುಂಬುತ್ತವೆ; ಈ-ಪುರವಣಿಯನ್ನು ಗಟ್ಟಿಗೊಳಿಸುತ್ತವೆ, ಅದಕ್ಕಾಗಿ ನಿಮ್ಮೆಲ್ಲರಲ್ಲೂ ಮನವಿ.

-ಫಟಾಕೀಸ್ ತಂಡ

ವಿಶೇಷ ಸಂಚಿಕೆ

Contents

ಹಲೋ ಫಟಾಕಿ..... **-ಶಿವಕುಮಾರ ಸಿ ಎಸ್** ....

ನಾನಿಲ್ಲವೇಕೆ ನಿನ್ನಂತೆ? - ಚಿತ್ರ. ಪಿ ....

ಗುಣಮಟ್ಟ ಅಥವ ಸಂಖ್ಯೆ - ಆಯ್ಕೆ ನಿಮ್ಮದು! -ಪೆರಿ ....

ಆ ನಿನ್ನ ನೆನಪಿನಲಿ-ಸುನೀಲ್ ಪವಾರ್ ....

ಮರೆತುಬಿಡು -ಶಿವಕುಮಾರ ಸಿ ಎಸ್ ....

ಸುಮ್ಮನೆ ಹಾಗೆ ಹೋಗಿದ್ದೆ ಶಾಲೆಗೆ. ನನ್ನ ಶಾಲೆಗೆ, ನಾ ಕಲಿತ ಶಾಲೆಗೆ...!-ಅವಿನಾಶ್ ಡಿ........

What is LOVE? -Krithi Satish........

ಮೇಳವೆಂಬ ಮಹಾಸಂಕ್ರಮಣ -ಮಂಜುನಾಥ್.ಎ.ಆರ್ ....

ಜಾಹ್ನವಿ -ರಾಧಾ .... **Error! Bookmark not define**

Not unless you are me... -Rajani Bhat........

ಶಿಕ್ಷಣ -ನಂದೀಶ್ ಕುಮಾರ್ ಎಂ ಕೊಪ್ಪಳ ....

|| सुकून || - Supriya Narayanakar ....

ತುಂತುರು –ರಕ್ಷಿತ್ ಕೊಟ್ಟೂರು........

In the Name of Development -sanjay ....

ಅಕ್ಷರದವ್ವ -ಚಿಕ್ಕವಿರೇಶ್ ....

Childhood-The age of Innocence -Athira ....

ಶಾಚೀತಿ - ವೈಷ್ಣವಿ ....

ನಾನು ಜಾತ್ರೆಗೆ ಹೋಗಬಲ್ಲೆ..? -ಮಂಜುಳ ಗೋನಾಳ........

Love with First MODEL – Vijayashree........

ನೋ ಎಂಟ್ರಿ –ರಾಘವೇಂದ್ರ ಬಿ ತಳಕಲ್ ....

“ಮನೆ ಮುಂದೆ TO-LET ಮತ್ತು ಮನೆ ಒಳಗೆ TOILET” ಸ್ವಾತಿ ಸುಬ್ರಹ್ಮಣ್ಯ ಕಲಬುರ್ಗಿ........

ಚಿಗುರಿದೆ ಕನಸು... ಹರೀಶ ಎಸ್.ಡಿ ....

Reminiscences of my Fellowship -Rajesh S Mahantmath........

Art By: Gargi (All four)........

ವಿಶೇಷ ಸಂಚಿಕೆ

ಆತ್ಮೀಯ ಫಟಾಕೀಸ್ ತಂಡದವರೇ,

ಓದು.... ಬರವಣಿಗೆಗಳು.... ಕಡಿಮೆ ಆಗುತ್ತಿರುವ ಈ ಸಮಯದಲ್ಲಿ ಕರ್ನಾಟಕದ ಫೇಲೋ-ಅಸೋಸಿಯೇಟ್ಸ್ ಬಳಗದ ಸದಸ್ಯರು ಸ್ವಯಂ ಆಸಕ್ತಿಯಿಂದ ಕ್ರಿಯಾಶೀಲ ಬರವಣಿಗೆಗೆಗಳ ಮೂಲಕ ಫಟಾಕೀಸ್ ಈ ಪತ್ರಿಕೆ ಹೊರತಂದಿರುವುದು ಪ್ರಶಂಸನೀಯ. ಒಂದು ವರ್ಷದ ಒಟ್ಟು ಥಿಮ್ಸ್‌ಗಳ ಎಲ್ಲರ ಬರವಣಿಗೆಗಳು ಅವಲೋಕಿಸಿದರೆ ತುಂಬ ಸೃಜನಶೀಲವಾಗಿಯೂ, ಸರಳವಾಗಿಯೂ, ಮೂಡಿಬಂದಿರುವುದು ಗಮನಿಸಬಹುದು. ಎಲ್ಲಾ ಸದಸ್ಯರು ತಮ್ಮ ಸ್ವತಂತ್ರ ಅನುಭವಗಳನ್ನು, ಆಲೋಚನೆಗಳನ್ನು, ಸಣ್ಣ ಸಣ್ಣ ಕಲಿಕೆಗಳನ್ನು ತುಂಬ ಸರಳವಾಗಿ ಮುಕ್ತವಾಗಿ ಬರವಣಿಗೆಯಲ್ಲಿ ತಂದಿರುವುದು ಕಾಣುತ್ತೇವೆ. ಪ್ರಾರಂಭದ ಸಂಚಿಕೆಯಿಂದ ಪ್ರಸ್ತುತ ಸಂಚಿಕೆಯನ್ನು ಅವಲೋಕಿಸಿದರೆ ಹಲವಾರು ವಿನೂತನ ಪ್ರಯೋಗಗಳು ಮಾಡಿರುವುದು ಕಂಡು ಬರುತ್ತದೆ. ಆ ಮೂಲಕ ತುಂಬ ಕಲರ್‌ಫುಲ್ ಆಗಿ ಮೂಡಿಬರುವಂತೆ ಮಾಡಿರುತ್ತಾರೆ. ಫಟಾಕೀಸ್ ತಂಡದ ಬಗ್ಗೆ ಹೇಳಲೇಬೇಕಾದ ಒಂದು ಮುಖ್ಯ ಸಂಗತಿ ಎಂದರೇ ಆ ತಂಡದ ಸದಸ್ಯರಿಗಿರುವ ಬದ್ಧತೆ, ಸಮಯಕ್ಕೆ ಸರಿಯಾಗಿ ನಿಗದಿತ ದಿನದಂದು 'ಬಯಲು' ಜೊತೆಯಲ್ಲಿ ಪ್ರಕಟವಾಗುವಂತೆ ಬೇರೆ ಬೇರೆ ಸ್ಥಳದಲ್ಲಿ ಕುಳಿತು ಕೆಲಸ ಮಾಡಿರುವ ಆ ಕೈಗಳನ್ನು, ಆ ಮನಸ್ಸುಗಳನ್ನು ಅಭಿನಂದಿಸಲೇ ಬೇಕು. ಒಂದು ವರ್ಷ ವಿನೂತನವಾಗಿ ಫಟಾಕಿಸ್ ಮುನ್ನಡೆಸಿದ ತಂಡವನ್ನು ಅಭಿನಂದಿಸುತ್ತಾ ಮುಂದಿನ ವರ್ಷದಲ್ಲಿ ಜವಾಬ್ದಾರಿ ವಹಿಸಿಕೊಳ್ಳುತ್ತಿರುವ ಹೊಸ ತಂಡದ ಸದಸ್ಯರು ಇದೇ ಮಾದರಿಯಲ್ಲಿ ಇನ್ನೂ ವಿನೂತನವಾಗಿ ಫಟಾಕೀಸ್ ಸಂಚಿಕೆಗಳನ್ನು ಹೊರ ತರಲಿ ಎಂದು ಈ ಮೂಲಕ ಆ ತಂಡಕ್ಕೆ ಶುಭ ಕೋರುತ್ತೇನೆ.

ಧನ್ಯವಾದಗಳೊಂದಿಗೆ

ಮಹದೇವ ಮೂಲಗೆ

ಕಲಬುರಗಿ ಜಿಲ್ಲಾ ಸಂಸ್ಥೆ

ಹಲೋ ಫಟಾಕಿ..... -ಶಿವಕುಮಾರ ಸಿ ಎಸ್

ಚಿತ್ರ: ಸುಪ್ರಿಯಾ ನಾರಾಯಣಕರ್

ಟ್ರಿಣ್ ಟ್ರಿಣ್... ಟ್ರಿಣ್ ಟ್ರಿಣ್... ಟ್ರಿಣ್ ಟ್ರಿಣ್... ಟ್ರಿಣ್ ಟ್ರಿಣ್...

ಫಟಾಕಿ : ಅಯ್! ಇವತ್ತು ಡೇಟ್ ಎಷ್ಟ? ಹದಿನೈದಾ? ಇಲ್ವಲ್ಲ, ಮತ್ತ್ಯಾರ ನನ್ಗ ಬೆಳ್-ಬೆಳಗ್ಗೇನೆ ಫೋನ್ ಮಾಡಿರದು; ಇರಿ ಅವರು ಯಾರ ಅಂತ ವಸಿ ಇಚಾರಸ್ತೀನಿ.

ಹಲೋ... ಯಾರ ಮಾತಾಡದು ನೀವು?

ಬಯಲು : ನಮಸ್ಕಾರ ಸಾಹೇಬ್ರೆ, ನಾನು ಬಯಲು.

ಹೇಗಿದ್ದೀರಿ ತಾವು, ಚೆನ್ನಾಗಿದ್ದೀರ? ಅಂದಂಗೆ 'ಹ್ಯಾಪಿ ಹೊಸ ವರ್ಷ' ನಿಮ್ಗೆ.

ಫಟಾಕಿ : ಅಣ್ಣಾ ನಮಸ್ಕಾರ, ನಿನ್ಗೂ 'ಯಾಪಿ ವಸ ವರ್ಸ'ಕಣ.

ನಾನ್ ಚೆಂದಾಕಿವ್ನಿ, ನಮ್ ಐಕ್ಳು ನನ್ನ ಚೆಂದಾಕ್ ನೋಡ್ಕಂಡವ್ರೆ, ನಿನ್ ಜೊತೆ ಮಾತಾಡಿ ಅದೆಷ್ಟ್ ಜಿನ ಆಯ್ತು ಏನ್ ಕತ; ನೀ ಹೆಂಗಿದ್ಯೆ? ಹೇಳಣ್ಣ

ಬಯಲು : ನಾನೂ ಚೆನ್ನಾಗಿದಿನಿ ಬಿಡು, ನನ್ಗೂ ಏನೂ ಕಡಿಮೆ ಮಾಡಿಲ್ಲ ತಿಂಗಳಾ-ತಿಂಗಳಾ ಹೊಸ ಬಟ್ಟೆ ಹಾಕಂಡು ಜುಮ್ಮಂತ ಮಿಂಚ್ತಾ ಇರ್ತೀನಿ.

ಆಮೇಲೆ ಇನ್ನೇನ್ ಸಮಾಚಾರ?

ಫಟಾಕಿ : ನಂದೇನಿದ್ದದಣ್ಣ, ಎಲ್ಲ ನೀನೆ ಯೋಳ್ಬಕು, ನೀ ಯೋಳುದ್ರ ನಾ ಕ್ಯೋಳ್ತಿನಿ ಅಷ್ಟಿಯ.

ಬಯಲು : ಅದೆ, ಮೊನ್ನೆ ತಾನೆ ನನಗೆ ೫ ವರ್ಷ ತುಂಬ್ತು. ಎಲ್ರೂ ಸೇರ್ಕಂಡು ನನ್ ಹುಟ್ದಬ್ಬಾನ ಗ್ರ್ಯಾಂಡಾಗೆ ಮಾಡುದ್ರು. ಆವತ್ತು ನೆಂಟ್ರು-ಇಷ್ಟರೆಲ್ಲ ಬಾಳ ಮಂದಿ ಬಂದಿದ್ರು; ಎಷ್ಟ್ ಜನ ಅಂತ ಗೊತ್ತ? ಬರೋಬ್ಬರಿ ೩೦ ಜನ.

ಓಯ್, ಅವತ್ತು ನೀನೂ ಬಂದಿದ್ಯಲ್ಲ..

ಫಟಾಕಿ : ಗೊತ್ತು ಬುಡಣ್ಣ.

ಆವತ್ತು ನಿನ್ನ ಹಿಡ್ದು ನಿಲ್ಲಕ್ಕಾಯ್ತಿತ್ತ. ಅದೇನ್ ಜನ, ಅದೇನ್ ಸುದ್ದಿ. ಆವತ್ತು ನಾನೂ ನಮ್ ಐಕ್ಳುಗೆಲ್ಲ ರಜಾ ಕೊಟ್ಬುಟ್ಟು ನಿಮ್ ಅಟ್ಟೀಲೆ ಕುಂತಿದ್ನಲ್ಲ..

ಬಯಲು : ಹಾ.. ಹೌದು ಹೌದು, ಆವತ್ ನೀನು ನನ್ಗೆ ತುಂಬಾ support ಮಾಡ್ದೆ ಕಣಯ್ಯ; ಸೋ ನಿನಗೆ, ನಿನ್ ಟೀಮ್‌ನವರಿಗೆ ನನ್ ಕಡೆಯಿಂದ lot of thanks..

ಫಟಾಕಿ : ಇಲ್ಲಿ ಬುಡಣ್ಣ; ಇದೆಲ್ಲ ಇರ್ಬೇಕು. ನಾ ಏನ್ ಹೊರಗಿನವನಾ? ಪ್ರತಿ ತಿಂಗ್ಳು ೧೫ನೇ ತಾರೀಖಾಯ್ತಿದ್ದಂಗೆ ಟಣ್ ಅಂತ ಗಂಟೆ ಒಡದಂಗ ನಾನು-ನೀನು ಇಬ್ರೂ ಒಟ್ಗೆ ತಾನೆ ರಲೀಜ್ ಆಗದು, ನನಗ ನೀನ್ ಅಗ್ಬಕು, ನಿನ್ಗ ನಾನ್ ಆಗ್ಬಕು, ಅದ್ಕೆಲ್ಲ ಥಾಂಕ್ಸು-ಗೀಂಕ್ಸು ಯಾತಿಕ್ಯ ಬುಡು.

ಬಯಲು : ಅದೂ ಸರಿ ಅನ್ನು.

ಅಂದಂಗೆ ನೆನ್ನೆ ಹೊಸಪೇಟೇಲಿ ನಿನ್ ಕೂರುಸ್ಕಂಡು ಅದೇನೋ ಮೀಟಿಂಗ್ ಮಾಡುದ್ರಂತಲ್ಲ, ಏನ್ ಕತೆ ನಿಂದು?

ಫಟಾಕಿ : ಹೂ ಕಣ ಮಾಡುದ್ರು. ನಾನು ನಡೆಯಾಕ್ ಸುರುಮಾಡಿ ಒಂದ್ ವರ್ಸ ಆಯ್ತಂತಲ್ಲ. ಅದ್ಕಿಯಾ ಇನ್ ಮುಂದ್ಕ ನನ್ನ ಯಾರ್ ನಡಸ್ಬೇಕು, ಹ್ಯಾಂಗ್ ನಡಸ್ಬೇಕು, ನಾ ಹೆಂಗ್ ಕಾಣ್ಬಕು, ಮತ್ತೊಂದು ಮಗದೊಂದು ಅಂತ ನಮ್ ಐಕ್ಳು ಅದೇನೇನೋ ಮಾತಾಡ್ಕಂಡ್ರು. ಛೆ! ಬುಡ್ತು ಅನ್ನು ಬರಿ ಮಾತಾಡ್ಕಂಡ್ರು ಅಂದ್ನೆ? ಇಲ್ಲ ಕಣ ಅದೇನೇನೋ ಸ್ಕೆಚ್ ಹಾಕಂಡ್ರು. ಒಟ್ನಲ್ಲಿ ನನ್ನೀಗ ಒಂದ್ ಕತ ಮಾಡ್ತರ ಅಂದಂಗಾಯ್ತು..

ಬಯಲು : ಓಹ್ ಹೌದ?

ಆವತ್ತು ಇಷ್ಟೆಲ್ಲ ಆಯ್ತು; ಪರವಾಗಿಲ್ಲ ಹಂಗಾದ್ರೆ ಮಾತು-ಕತೆ ಎಲ್ಲ ಜೋರಾಗೆ ನಡೆದಿರಬೇಕು.

ಫಟಾಕಿ: ಹೂ ಕಣಣ್ಣ ಸಂಜಿಗಂಟ ಬರಿ ನಂದೇ ಮಾತು.

ನೀ ನೋಡ್ಬೇಕಾಗಿತ್ತು ಅದ; ನನ್ಗಂತೂ ಅದು ಬರಿ ಮೀಟಿಂಗು ಅಂತ ಅನ್ನಿಸ್ಲೇ ಇಲ್ಲ.

ಆವತ್ತು ನಮ್ ಐಳ್ಳು ನೋಡುದ್ರ ನನ್ಗೇ ಒಂಥರ ಕುಸಿ ಆಗದು.

ನಿನ್ಗೂ ಗೊತ್ತಲ್ಲ ಇಲ್ಲೀತನಕ ನಾನು ೧೩ ಸತಿ ಬೆಲ್ ಬಾರ್ಸಿವ್ನಿ ಅಂತ. ಐಕ್ಳು ಅದ್ನೆಲ್ಲನು ನೆನ್ಸ್ಕಂಡ್ರು ಕಣ. ಒಂದೊಂದ್ ಮಾಸ್ದಾಗೂ ನನ್ಗ ಬಣ್ಣ ಬಳದವರ್ಯರಾರ? ನನ್ ಒಡ್ಲು ತುಂಬುಸ್ದವರ್ಯಾರ? ಚಿತ್ರ ಕೊರದವರ್ಯಾರ? ಪ್ರತಿ ಸಲ್ಕ್ಕುವಿ ಹಿಂಗ್ ಬರ್ದಿದ್ದು ಹಂಗ್ ಕೊರ್ದಿದ್ದನ್ನೆಲ್ಲ ಎಲ್ಲೆಲ್ ಹಾಕ್ಬೇಕು ಅಂತ ತಲೆ ಕೆಡ್ಸ್ಕಂಡು ಅದನ್ನ ಚೆಂದಾಗಿ ಮಾಡಿ ನಿನ್ ಕೈಗಿತ್ತಿದ್ದವರ್ಯಾರ? ಅನ್ನದ್ನೆಲ್ಲನುವಿ ಬಾಯ್ತುಂಬ ಮಾತಾಡ್ಕಂಡ್ರು. ನನಗಂತೂ ಅದ್ನೆಲ್ಲವಿ ನೋಡಿ ಆನಂದ ಅಂತಾರಲ್ಲ ಅದು ಆಯ್ತು ಕಣ.

ಬಯಲು : ತುಂಬಾ ಸಂತೋಷ, ತುಂಬಾ ಸಂತೋಷ. ನೀನು ಇಷ್ಟೆಲ್ಲಾನು ಹೇಳಿದ್ಮೇಲೆ, ನಿನ್ ಹತ್ರ ಇನ್ನು ಸ್ವಲ್ಪ ಮಾತಾಡ್ಬೇಕು ಅನ್ನಿಸ್ತಾ ಇದೆ ಮಾತಾಡ್ಲ?

ಫಟಾಕಿ : ಅಯ್ ಅದ್ಕೇನಾಯ್ತು ಮತಾಡಣ್ಣ.

ನಾನೂ ಇವತ್ತು ಮಾತಾಡೋ ಮೂಡ್ನಲ್ಲಿವ್ನಿ.

ಬಯಲು : ನೀನು ಹ್ಯಾಂಗ್ ಸುರು ಆದೆ? ನಿನ್ನ ಯಾರು ಸುರು ಮಾಡುದ್ರು? ಯಾಕ್ ಸುರು ಮಾಡುದ್ರು?

ಅದರ ಬಗೆ ಸ್ವಲ್ಪ ಹೇಳು.

ಫಟಾಕಿ : ಅಣ್ಣ ಅದನ್ನೇನಾದ್ರೂ ಮರೆಯಕ್ಕಾದದ? ಯೋಳ್ತೀನಿ ಕೇಳು ಅದ..

ಹಿಂಗೆ, ವೋದ್ ವರ್ಸ ಗುಲ್ಬರ್ಗದಲ್ಲಿ CCW ನಡಿತಾ ಇತ್ತು, ಕೊನ ದಿನ ಅಲ್ಲಿಗ್ ಬಂದಿದ್ ಐಕ್ಳೆಲ್ಲ ಜೋಶಲ್ಲಿ ತಮ್-ತಮ್ ಫೀಲಿಂಗ್ಸ್ನೆಲ್ಲನುವಿ ಹಂಚ್ಕತಾ ಇದ್ರೋ. ಆಗ ಪೆರಿ ಸರ್ರು ಒಂದ್ ಮ್ಯಾಗಜೀನ್ ತರೋಣ್ವ ಅಂತ ಕೇಳುದ್ರು, ಅದ್ಕ ಐಕ್ಳಲ್ಲವಿ ಅದೇ ಜೋಶಲ್ಲಿ ಆಗಬೋದು, ಆಗಬೋದು ಅಂದ್ಬುಟ್ರೋ. ಅಷ್ಟೆ ಕಣ. ತಕ ಇನ್ next ಐದ್ ಮಿನಿಟ್ನಲ್ಲಿ ಅದರ್ ಸಲುವಾಗಿ ಒಂದ್ ಟೀಮ್ನೂ ರೆಡಿಮಾಡ್ಬುಟ್ರು, ಮಾತ್-ಮಾತಾಡ್ತ ಒಂದ್ ನನ್ಗ ಒಂದ್ ಎಸ್ರುನೂ ಇಟ್ಬುಟ್ರು. ಇನ್ನು ಮುಂದ್ಕ ಏನೇನಾಯ್ತು ಅನ್ನದು ನಿನ್ಗೇ ಗೊತ್ತು..

ಅಮೇಲೆ, ನನ್ ಯಾಕ್ ಸುರು ಮಾಡುದ್ರು ಅಂತ ಕೇಳ್ದಲ್ಲ, ಅದು ಯಾಕ ಅನ್ನದು ನಿಂಗೂ ಗೊತ್ತು. ಆದ್ರೂ ಏಳ್ತೀನಿ ಕೇಳು,

ಈಗ ಸದ್ಯಕ್ಕ ನಾನೂ-ನೀನು ಇಬ್ರೆ ತಾನಿಯ ಬತ್ತಾ ಇರದು. ನೀನೋ ಇದನ್ನೇ ಬರೆಬೇಕು, ಅದನ್ನೇ ಬರೀಬೇಕು, ಈ ಇಸ್ಯದ್ ಮೇಲೆ ಬರಬೇಕು ಆ ಇಸ್ಯದ್ ಮೇಲೆ ಬರೀಬೇಕು ಅಂತ ನಕರ ಮಾಡ್ತಿಯ; ಆದ್ರ ನಮ್ ಐಕ್ಳು ಈಗ್

ತಾನೆ ಬಂದವೆ, ಅವರ್ಗೆ ಬರಿಬೇಕು ಅನ್ನೋ ಆಸೆ ಇರುತ್ತೆ ಆದ್ರೆ ನೀ ಯೋಚುದ್ದನ್ನ ಬರೆಯಾಕ್ಕಾಗ್ದೇ ಇರಬಹುದು ಅದ್ಕೆ ಅವ್‌ರ್ಗೆ ಇಷ್ಟ ಬಂದದ್ನ ಬರೀಲಿ ಅಂತ ನನ್ ಸುರು ಮಾಡುದ್ರು ಅಷ್ಟೆ.

ಬಯಲು : ಓಹ್ ಹೌದಾ, very good.

ಸರಿ, ಮೊದಲ್ನೇ ಸಲ ರಿಲೀಸ್ ಅದಾಗ ನಿನಗೆ ಏನ್ ಅನ್ನುಸ್ತು ಹೇಳು?

How did you feel the moment?

ಫಟಾಕಿ : ಓಹ್ ಅದ? ನನ್ಗ ಇನ್ನು ಚೆನ್ನಾಗ್ ಗೆಪ್ತಿ ಅದ ಅದು. ಆವತ್ತು ನವಂಬರ್ ೧೪-೨೦೧೬, ರಾತ್ರಿ ೨ ಗಂಟ ಆಗಿತ್ತು ನಮ್ಮವರೆಲ್ಲವಿ ಒಂದ್ ರೂಮಲ್ಲ್ ಸೇರ್ಕಂಡು ನನ್ಗ ಫೈನಲ್ ಆಪರೇಸನ್ ಮಾಡ್ತಿದ್ರು, ಒಂದ್ ಸರಿ ಆ ಅಂಗಿ ಹಾಕದು ಅದು ಚೆನ್ನಾಗಿಲ್ಲ ಅಂತ ಈ ಅಂಗಿ ಹಾಕದು, ಅದು ಚೆಂದಾಗ್ಕಾಣಲ್ಲ-ಇದು ಚೆಂದಾಗ್ ಕಾಣಲ್ಲ, ಇದನ್ನ್ ಹಂಗ್ ಮಾಡು-ಅದನ್ನ್ ಹಿಂಗ್ ಮಾಡು... ಅಂತ ಕಲ್ಸ ನಡೀತ್ಲೇ ಇತ್ತು, ನಡೀತ್ಲೇ ಇತ್ತು. ಅಂತೂ ಕೊನಗ ೩ ಗಂಟ ಅನ್ನಪ್ಪ ನನ್ ರೂಪ-ಬೈರೂಪ ಎರಡೂ ನೋಡಿ ಸಮಾಧಾನ ಆದ್ಮೇಲ ನಮ್ ಐಕ್ಳು ಮನಿಕಂಡೊ. ನನಗಂತೂ ಗಡದ್ದಾಗಿ ನಿದ್ದ್ ಅತ್ಬುಡ್ತು. ಆದ್ರ ನಮ್ ಐಕ್ಳು ನಿದ್ದ ಮಾಡುದ್ರೋ ಮಾಡ್ಲಿಲ್ವೋ ನನಗ್ ಗೊತ್ತಾಗ್ಲಿಲ್ಲ. ಒಟ್ನಲ್ಲಿ ಅವತ್ತು ನಮ್ ಐಕ್ಳು ಬಾಳ ಕಷ್ಟಪಟ್ರು ಅನ್ನೋದ್ ಮಾತ್ರ ಚೆನ್ನಾಗ್ ಗೊತ್ತು.

ಬಯಲು : ಹೌದು, ಹೌದು ನನಗೂ ನೆನಪಿದೆ. ಆವತ್ತು ನೀನು ನನ್ ಮನೆಗ್ ಬಂದಾಗ ರಾತ್ರಿ ೩ಗಂಟೆ ಆಗಿತ್ತು. First entry ಆದ್ರೂ ನಿಮ್ಮವರು ನಿನ್ನ ಭಾರಿ ಚೆನ್ನಾಗೇ ರೆಡಿಮಾಡಿ ಕಳ್ಸಿದ್ರು. ನೀ ಬರೋವಾಗ 'ಒಂದಿಷ್ಟು ಮದ್ದು ಮತಾಪು' ತುಂಬ್ ಕಳ್ಸಿದ್ರು ಮತ್ತೆ ಯಾರ್‍ಯಾರೋ ನಿಂಗ್ ವಿಶ್ ಮಾಡಿದ್ರು, ಅದ್ಯಾರೋ ಚಂದ್ ಚಿತ್ರ ಇಳ್ಸಿದ್ರು ಒಟ್ನಲ್ಲಿ ನಿಂದು ಒಳ್ಳೇ ಓಪನಿಂಗು.

ಮತ್ತೆ, ಪ್ರತೀ ಸಲ ನೀನ್ ರಿಲೀಸ್ ಆಗೋಕೆ ಮುನ್ನ ನಿಮ್ ಐಕ್ಳು ಏನೆಲ್ಲ ಕೆಲ್ಸ ಮಾಡ್ತಿದ್ರು, ಹೆಂಗ್ ಕೆಲ್ಸ ಮಾಡ್ತಿದ್ರು ಅದರ್ ಬಗ್ಗೆ ಸ್ವಲ್ಪ ಹೇಳ್ತೀಯ?

ಫಟಾಕಿ : ಅಣ್ಣ ಇಷ್ಟೆಲ್ಲನುವಿ ಹೇಳಿ ಅದನ್ನ್ ಹೇಳ್ದೇ ಇದ್ರ ಆ ದೇವ್ರು ನನ್ನ ಕ್ಷಮಸಾಕಿಲ್ಲ ಕಣ. ಏಳ್ತಿನಿ ಕೇಳು ಅದ..

ನಮ್ ಐಕ್ಳು ಪ್ರತಿ ಸಲ್ಕುವಿ ಎಲ್ರಗೂ ಒಚಿಟ ಹಾಕೋರು, ಅದರ್ ನೆಪದಾಗ ಎಲ್ರುವಿ ಬರೀರಿ ಅಂತ ಕೇಳೋರು, ಅದರ್ ಜೊತ್ಗ ಒಬ್ಬೊಬ್ಬುರ್ಗೂ ಫೋನ್ ಮಾಡಿ ಬರೆಯಾಕ್ ಹೇಳೋರು. ಹಿಂಗೆಲ್ಲ ಮಾಡಿದ್ಮೇಲ ಬಂದಂತ ಬರವಣಿಗೆಗಳ್ನೆಲ್ಲ ಕಲೆಕ್ಟ್ ಮಾಡಿ, ಕೊನ್ಗ ನನ್ನ ಅಲಂಕಾರ ಮಾಡ್ತಿದ್ರು. ನಮ್ ತಂಡ್ದೊಳಗ ಕೆಲೂರು ಚಿತ್ರ ಬರಿತಿದ್ರು, ಕೆಲೂರು ಪದ್ಯ-ಗದ್ಯ ಬರೀತಿದ್ರು, ಕೆಲೂರು edit ಮಾಡ್ತಿದ್ರು, ಮತ್ತೆ ಕೆಲೂರು re-type ಮಾಡ್ತಿದ್ರು ಹಿಂಗ ಎಲ್ರುವಿ ಎಲ್ಲ ಕೆಲ್ಸಾನು ಹಂಚ್ಕಂಡು ಮಾಡ್‌ತಿದ್ರು. ಅದ್ಕಿಯಾ ನಾನು ಪ್ರತಿ ಸಲಕ್ಕೂ ಟೈಮ್ಗ್ ಸರಿಯಾಗಿ ನಿನ್ ಜೊತುಗ್ ಬರಾಕ ಸಾಧ್ಯ ಆಯ್ತುತ್ತು. ಅದ್ರ ಬಗ್ಗೆ ಹೇಳದು ಅಂದ್ರ ನಂಗ ಹೆಮ್ಮೆ ಅನ್ಸುತ್ತ.

ಬಯಲು : Very good, team work ಅಂದ್ಮೇಲೆ ಹಂಗೆ ಇರ್ಬೇಕು.

ಆಮೇಲೆ, ಈಗ ನಿನಗೆ ಒಂದ್ ವರ್ಷ ತುಂಬ್ತಲ್ಲ? ಈ ಕ್ಷಣಕ್ಕೆ ನಿನಗೆ ಏನ್ ಅನ್ನಿಸ್ತಾ ಇದೆ ಅದನ್ನ್ ಸ್ವಲ್ಪ ಹೇಳು.

ಫಟಾಕಿ : ತುಂಬಾ ಕುಸಿ ಕಣಣ್ಣ. ಒಂದ್ ವರ್ಸ ಇಷ್ಟ್ ಜಲ್ದಿ ಆಗೋಯ್ತಾ ಅನ್ನುಸ್ತಾ ಅದ. ಒಂದ್ನೇ ತಿಂಗಳ್ಗೂ ಈ ತಿಂಗಳ್ಗೂ ನನ್ನೇ ನಾ ನೋಡ್ಕಂಡ್ರ ತುಂಬಾ ಬದಲಾಗಿವ್ನಿ ಅನ್ಸುತ್ತ. ಈ ಒಂದ್ ವರ್ಸದಲ್ಲಿ ಅದೆಷ್ಟ್ ಜನ ನನಗೋಸ್ಕರ ಬರುದ್ರು, ಅದೆಷ್ಟ್ ಜನ ನನ್ನನ್ನ ಓದುದ್ರು ಅವರೆಲ್ರಗುವಿ Thanks ಹೇಳ್ಬಕು ಅನ್ಸುತ್ತ. ಮತ್ತ ಇಷ್ಟ್ ಜಿನ ನನ್ ಜೊತಗಿದ್ದು ನನ್ ನಡಸ್ಕಂಡ್ ಬಂದ ನಮ್ ಐಕಳು- ಅವ್‌ರ್ಗೂ ಥಾಂಕ್ಸ್; ನಾನು ಅವ್ರನ್ನ ಯಾವತ್ತು ಮರೆಯಾಕಿಲ್ಲ..

ಒಂದ್ ವರ್ಸ್ ಆದ್ ಸಲುವಾಗಿ ಈಗ ನಮ್ ಟೀಮು ಬದಲಾಗದ, ಇನ್ ಮುಂದ್ಕ ನನ್ನ ಹೊಸ ಐಕ್ಳು ನಡಸ್ತರ. ಈ

ಜವಾಬ್ದಾರಿ ಹೊತ್ಕೊಂಡಿರೋ ಅವ್ರುಗ್ಳ thanks ಮತ್ತು all the best ಇದರ್ ಜೊತ್ಗೆ ನೀನು ನೀನೂ ನನ್ಗೆ ತುಂಬಾ help ಮಾಡಿದ್ಯೆ ಅದ್ಕೆ ನಿನ್ಗೂ ದೊಡ್ ಥಾಂಕ್ಸ್..

ಬಯಲು : welcome, you are welcome; any way ಇಷ್ಟೊತ್ತು ನಿನ್ ಜೊತೆ ಮಾತಾಡಿದ್ದು ತಂಬಾ ಖುಷಿ ಆಯ್ತು.

ಹಾಂ.. sorry ಹೇಳೋದ್ ಮರ್ತೋಗಿತ್ತು ನಿನಗೆ ನನ್ ಕಡೆಯಿಂದ ಮತ್ತು ನಮ್ಮವರ್ ಕಡೆಯಿಂದ Happy ಹುಟ್ಟಬ್ಬ. ಹುಟ್ಟಬ್ಬ ಬಲು ಜೋರ್ ನಡೆದಿರ್ಬೇಕಲ್ಲ?

ಫಟಾಕಿ : ಹೌದು ನಮ್ ಐಕ್ಳ್ ನೋಡುದ್ರ ನಂಗೂ ಹಂಗೇ ಅನ್ಸುತ್ತ ಕಣ. ಮೊನ್ನೆ ಮೀಟಿಂಗ್ನಲ್ಲಿ ನಮ್ ಐಕ್ಳು ಅದನ್ನೂ ಮಾತಾಡ್ಕಂಡ್ರು; ಈ ಮಾಸ್ದಲ್ಲಿ ನನ್ನ ಪೆಸಲ್ edition ಮಾಡ್ತರಂತ. ಅದಂಗ ನಾನು ಇವತ್ತು ನಿನ್ ಜೊತೆಗೇ ಇವ್ನಿ ಅದೇನ್ ಪೆಸಲ್ ಮಾಡಿದರೋ ವಸಿ ನೋಡ್ಬುಡು. ನೋಡ್ಬುಟ್ಟು ನನ್ಗ ಫನ್ ಮಾಡು.

ಚಿತ್ರ: ಸುಪ್ರಿಯಾ ನಾರಾಯಣ್‌ಕರ್

ಬಯಲು : ಆಯ್ತು ಆಯ್ತು ನೋಡ್ತಿನಿ, ನೋಡ್ತಿನಿ.

Any way ನಿನ್ನ್ ಪಾಲಿಗೆ ಇಂತ ಹುಟ್ಟಬ್ಬಗಳು ಹತ್ತಾಗ್ಲಿ, ಹತ್ತು ನೂರಾಗ್ಲಿ, ನೂರು ಸಾವಿರ ಆಗಲಿ ಅಂತ ಹಾರೈಸ್ತೀನಿ.

bye..

ಫಟಾಕಿ : thanks ಅಣ್ಣ bye.. bye..

ನಾನಿಲ್ಲವೇಕೆ ನಿನ್ನಂತೆ? - ಚಿತ್ರ. ಪಿ

ನಿನ್ನಂತೆಯೆ ಹಾರುವ ಆಸೆ ನನಗೆ
ಆ ನೀಲಿ ಆಕಾಶದಲ್ಲಿ ನೀ ತೇಲುವಾಗ
ನಿನ್ನ ಬಣ್ಣ ಕಣ್ಣಿಗೆ ಕಟ್ಟಿದಾಗ
ಹೇಳಿತು ನನ್ನ ಮನ
ನಾನಿಲ್ಲವೇಕೆ ನಿನ್ನಂತೆ?

ಹೂಗಳೊಡನೆ ನೀ ಆಡುವಾಗ..!
ಗಾಳಿಯೊಡನೆ ನೀ ಹಾಡುವಾಗ..!
ಮಕರಂದದ ಸವಿಯನು ನೀ ಸವಿಯುವಾಗ
ಹೇಳಿತು ನನ್ನ ಮನ
ನಾನಿಲ್ಲವೇಕೆ ನಿನ್ನಂತೆ?

ವಿಶೇಷ ಸಂಚಿಕೆ

ಗುಣಮಟ್ಟ ಅಥವ ಸಂಖ್ಯೆ - ಆಯ್ಕೆ ನಿಮ್ಮದು!   -ಪೆರಿ

ಎಲ್ಲರಿಗೂ ಕಾಡುವ ಈ ಪ್ರಶ್ನೆಯಲ್ಲಿ ಏನಿದೆ? 'ಕೆಲಸ ಸ್ವಲ್ಪ ಕ್ವಾಲಿಟಿ ಆಗಬೇಕು' ಎಂದು ಹೇಳಿದಾಗ ಸಾಧಾರಣವಾಗಿ ಕೇಳಿ ಬರುವ ಉತ್ತರ, 'ಕ್ವಾಲಿಟಿ ಆಗಬೇಕಾದರೆ ಅಷ್ಟು ಬೇಗ ಆಗಲ್ಲ'. ಇನ್ನೊಂದು ಉತ್ತರ, 'ಕ್ವಾಲಿಟಿ ಕೆಲಸ ಆಗಬೇಕು ಅಂದರೆ ಅಷ್ಟು ಸಂಖ್ಯೆಯಲ್ಲಿ ಮಾಡಲಾಗಲ್ಲ.' 'ಕ್ವಾಲಿಟಿ ಬೇಕು ಅಂತೀರಿ, ಅಷ್ಟು ಬೇಕು ಅಂತೀರಿ, ಅದು ಹೇಗೆ ಸಾಧ್ಯ?' 'ಒಂದು ಒಳ್ಳೆಯ ಕೆಲಸ ಮಾಡುತ್ತೇನೆ ಅಥವಾ ತುಂಬಾ ಕೆಲಸ ಮಾಡುತ್ತೇನೆ, ಒಳ್ಳೆಯದು ಬೇಕು ತುಂಬಾನೂ ಬೇಕು ಅಂದರೆ ಹೇಗೆ?' 'ಒಂದು ಒಳ್ಳೆಯದು ತೆಗೆದುಕೊಳ್ಳಿ ಅಥವಾ ತುಂಬಾ ತೆಗೆದುಕೊಳ್ಳಿ, ಎರಡು ಸಿಗಲು ಸಾಧ್ಯವೇ ಇಲ್ಲ!' ಇಂತ ಸಂಭಾಷಣೆ ಮುಗಿಯದ ಸಂಭಾಷಣೆ. ಆಗ ಏನು ಮಾಡುವುದು, ಹೇಗೆ ಮಾಡುವುದು, ಮುಂದೇನು ಮಾಡುವುದು, ಇತ್ಯಾದಿಯಾಗಿ ಏನೂ ತೋಚದೆ ನಾವು ಸುಮ್ಮನಾಗುತ್ತೇವೆ. 'ಸರಿ, ಚೆನ್ನಾಗಿ ಮಾಡಿಕೊಡಿ' ಎಂದು ಬಿಟ್ಟು ಬರುತ್ತೇವೆ.

ಈ **ಕ್ವಾಂಟಿಟಿ** ಅಥವ **ಕ್ವಾಲಿಟಿ** ಎಂಬ ವಾದದ ಒಳ ಹೊಕ್ಕು ಸ್ವಲ್ಪ ನೋಡುವ, ಇದರಲ್ಲೇನಿದೆ? ಈ ವಾದ ಸರಿಯಾ? ತಪ್ಪಾ? ಹೀಗೆ ಅದು ಬೇರೆಬೇರೆ ಇರುವುದು ಹೌದಾ!

ನಾನು ಈ ಬಗ್ಗೆ ಯೋಚಿಸುವುದು ತುಂಬಾ ಸಮಯದಿಂದ ನಡೆದಿದೆ. ಕೆಲವು ಉದಾಹರಣೆಗಳು ಕಣ್ಣೆದುರಿಗೆ ಬರುತ್ತವೆ. ಒಂದು ಉದಾಹರಣೆ **ಲತಾ ಮಂಗೇಶ್ಕರ್** ಅವರದ್ದು. ಎಷ್ಟು ಹಾಡು, ಎಂತ ಮಾಧುರ್ಯ ಅವರದ್ದು. ಹೆಚ್ಚುಹೆಚ್ಚು ಹಾಡುತ್ತಾ ಹೊದ ಹಾಗೆ ಅವರ ಹಾಡುಗಳು ಚೆನ್ನಾಗಿ ಆಗಿವೆ, ಕಳಪೆಯಾಗಿಲ್ಲ. ಹೆಚ್ಚು ಮಾಡುವುದರಿಂದ ಗುಣಮಟ್ಟ ಕಳಪೆಯಾಗುವುದಾದರೆ ಆಮೇಲೆ ಹಾಡಿದ ಹಾಡುಗಳು ಕಳಪೆ ಆಗಬೇಕಿತ್ತು, ಅಲ್ಲವೇ? ವಾಸ್ತವವಾಗಿ ಲತಾರವರ ಹಾಡುಗಳು ಉತ್ತಮವಾಗುತ್ತಾ ಹೋಗುತ್ತವೆ. ಆದುದರಿಂದ ಸಂಖ್ಯೆ

ಹೆಚ್ಚಾಗುವುದರಿಂದ, ಗುಣಮಟ್ಟ ಕಡಿಮೆ ಆಗಬೇಕಾಗಿಲ್ಲ ಎಂದು ಈ ಉದಾಹರಣೆಯಿಂದ ನಮಗೆ ಗೊತ್ತಾಗುತ್ತದೆ. ಲತಾರವರ ಹಾಗೆ ಗಂಗೂಬಾಯಿ ಹಾನಗಲ್, ಭೀಮಸೇನ್ ಜೋಶಿ . . . ಹೀಗೆ ಒಂದೇ ಎರಡೇ, ನೂರಾರು ಉದಾಹರಣೆಗಳನ್ನು ಸಂಗೀತಗಾರರಲ್ಲದ ನಾವು ಕಾಣುತ್ತಾ ಹೋಗಬಹುದು.

ಬರವಣಿಗೆ ತೆಗೆದುಕೊಂಡರೆ ಕೂಡ ಒಳ್ಳೆಯ ಬರವಣಿಗೆ ಬರೆದ ಸಾಹಿತಿಗಳನ್ನು ಗಮನಿಸಿದರೆ - ಕುವೆಂಪು, ಪ್ರೇಮ್‌ಚಂದ್, ಖುಶ್ವಂತ್‌ಸಿಂಗ್‌ರಂತವರು - ತುಂಬಾ ಒಳ್ಳೆಯ ಸಾಹಿತಿಗಳು ತುಂಬಾ ಬರೆದಿರೋದು ಕಾಣುತ್ತೆ. ಇವರ ಬರೆಹಗಳು ಒಂದೇ ಎರಡೇ? ಇವರುಗಳು ಬರೆದು ಹಾಕಿರುವಂತಾದ್ದು ಅಸಂಖ್ಯ, ಅನಂತ! ಕುವೆಂಪು ಒಂದು ಸಾಗರ. ಪ್ರೇಮ್‌ಚಂದರ ಕಥಾಲೋಕ ನಮ್ಮನ್ನು ಬೆರಗುಗೊಳಿಸುತ್ತದೆ. ಖುಶ್ವಂತ್‌ಸಿಂಗ್ ಪ್ರತಿದಿನ ಒಂದಷ್ಟು ಬರೆಯುತ್ತಿದ್ದರು. ಇವರುಗಳ ಬರವಣಿಗೆಯ ಸಂಖ್ಯೆ ಅಷ್ಟು ಹೆಚ್ಚಾದ ಹಾಗೆ ಗುಣಮಟ್ಟ ಕುಸಿದಿಲ್ಲ ಅಲ್ಲ? ಹಾಗಾದರೆ ಜನರಲ್ಲಿ ಈ ಪ್ರಶ್ನೆ ಎಲ್ಲಿಂದ ಬಂತು? ಗುಣಮಟ್ಟ ಬೇಕಾ? ಸಂಖ್ಯೇನಾ?

ನಮ್ಮ ಮಗಳಿಗೆ ಮದುವೆ. ಅಡುಗೆಗೆ ಯಾರನ್ನು ಕರೀತೇವೆ? ಒಳ್ಳೆಯ ಅಡುಗೆ ಮಾಡುವವರನ್ನು. ಈ 'ಒಳ್ಳೆಯ' ಅಂದರೇನು? ತುಂಬಾ ರುಚಿಕರವಾದ ಅಡುಗೆ ಮಾಡಿ ನಗುಮುಖದಲ್ಲಿ ಬಡಿಸುವವರನ್ನು. ಒಳ್ಳೆಯ ಅಡುಗೆ ಗುಣಮಟ್ಟ ಕಾಯ್ದುಕೊಳ್ಳಬೇಕೆಂದು ಒಂದು ಸ್ವಲ್ಪ ಜನರಿಗೆ ಮಾತ್ರ ಊಟ ಕೊಡಲಾಗುತ್ತಾ . . . ಅದು ಮೂರ್ಖತನವಾದೀತು. ಹಾಗಾದರೆ ಈ 'ಒಳ್ಳೆಯ'ದರಲ್ಲಿ ಎಲ್ಲವೂ ಅಡಕವಾಗಿದೆ ಅಲ್ಲವೆ? ರುಚಿಕರವಾದ ಊಟ, ಆರೋಗ್ಯಕರವಾದ ಊಟ, ಎಲ್ಲಾ ಜನರಿಗೂ ಸಾಕಾಗುವಷ್ಟು ಊಟ ಮತ್ತು ಸಾಧ್ಯವಾದಷ್ಟು ಕಡಿಮೆ ಖರ್ಚಿನಲ್ಲಿ ಒಳ್ಳೆಯ ಊಟ. ಇದು ಎಲ್ಲರೂ ಪ್ರಯತ್ನಿಸುವುದು. ಹಾಗೆ ನೋಡಿದರೆ ಇದುವೇ managementನ ಅತೀ ಶ್ರೇಷ್ಠ theory. ಈ 'ಒಳ್ಳೆಯ' ಎಂಬುದರಲ್ಲಿ ಗುಣಮಟ್ಟ ಮತ್ತು ಸಂಖ್ಯೆ ಎರಡೂ ಅಡಕವಾಗಿದೆ. ಅಡುಗೆಯವನು 10 ಜನರಿಗಾದರೆ ಶ್ರೇಷ್ಠ ಊಟ, 100ಕ್ಕಾದರೆ ಸಾಧಾರಣ ಊಟ, 1000ಕ್ಕಾದರೆ ಕಳಪೆ ಊಟ ಎಂದು ಹೇಳುವುದಿಲ್ಲ!

ಪ್ರಕೃತಿಯಲ್ಲೂ ಸಂಖ್ಯೆ ಹೆಚ್ಚಾದಾಗ ರುಚಿ ಕಡಿಮೆ ಆಗುವುದು ಎಂದು ಇಲ್ಲ. ಸಿಹಿ ಮಾವಿನ ಮರದಲ್ಲಿ ಸಿಹಿ ಮಾವು 10 ಇರಲಿ, 10 ಸಾವಿರವಿರಲಿ . . . ಆದುದರಿಂದಲೇ ಸಂಖ್ಯೆ ಹೆಚ್ಚಾದಾಗ ಗುಣಮಟ್ಟ ಕಡಿಮೆ ಆಗುವುದು ಎಂಬುದು ಇಲ್ಲ.

ನಾವು ನಮ್ಮ ಕೆಲಸದಲ್ಲಿ ನೋಡಿದ್ದೇವೆ, ಗುಣಮಟ್ಟ ಕುಸಿಯುವುದು ಸಂಖ್ಯೆ ಹೆಚ್ಚಾದಾಗ ಅಲ್ಲ, ಅದು ಕುಸಿಯುವುದು ನಮ್ಮ ಶ್ರಮ ಕಡಿಮೆ ಆದಾಗ, ನಮ್ಮ ಏಕಾಗ್ರತೆ ಕಡಿಮೆಯಾದಾಗ. ಅನೇಕ ಇತರೆ ಕೆಲಸಗಳ ನಡುವೆ ಅದರ ಬಗೆಗೆ ಫೋಕಸ್ ಮಾಡಲಾಗದಾಗ . . . ಎರಡು ಮೂರು ಕೆಲಸಗಳನ್ನು ತೆಗೆದುಕೊಂಡು ನಿಭಾಯಿಸಲು ಆಗದಿರುವಾಗ . . . ಹಾಗೆ ನೋಡಿದರೆ, ಗುಣಮಟ್ಟ ಕುಸಿಯುವುದು ಸಂಖ್ಯೆ ಕಡಿಮೆ ಇದ್ದಾಗಲೂ ಆಗುತ್ತದೆ. ಯಾವ ಕೃತಿಗೆ ಮೌಲ್ಯ ಬರುವುದು ಎಂದರೆ ಅದು ನಿರಂತರವಾಗಿ ಗುಣಮಟ್ಟವನ್ನು

ಕಾಯ್ದುಕೊಂಡಾಗ ಮಾತ್ರ. ಇವತ್ತು ಒಳ್ಳೆಯ ಗುಣಮಟ್ಟದ ಕೃತಿ ನಾಳೆ ಕಳಪೆ ಕಂಡಾಗ ಅದರ ಮೌಲ್ಯ ಕುಸಿಯುತ್ತದೆ. ಆದುದರಿಂದಲೇ ಜನರು, ತಮ್ಮ ಸಂಘ ಸಂಸ್ಥೆಗಳ ಬಗೆಗೆ 'ಸ್ಥಾಪನೆ 1930' ಎಂದು ಹೇಳುವುದಿದೆ. ಆಗ ಅವರು ಹೇಳಿಕೊಳ್ಳುವುದು, '1930ರಿಂದ ಇಲ್ಲಿತನಕ ನಾವು ಗುಣಮಟ್ಟವನ್ನು ಕಾಯ್ದುಕೊಂಡಿದ್ದೇವೆ' ಅಂತ. ಅಷ್ಟೇ ಅಲ್ಲ, 1930ರಿಂದ ಈವರೆಗೆ ನಾವು ಗುಣಮಟ್ಟವನ್ನು ಉತ್ತಮಗೊಳಿಸುತ್ತಾ ಬಂದಿದ್ದೇವೆ ಎಂತಲೂ ಹೇಳುತ್ತಿರುತ್ತಾರೆ.

ನಮ್ಮ ಕೆಲಸದಲ್ಲಿ ಈ ಮೂರು ಅಂಶಗಳು ತುಂಬಾ ಮುಖ್ಯ. ಅತ್ಯಂತ ಒಳ್ಳೆಯ ಕೆಲಸ ನಡೆಯಬೇಕು, ಅದು ತುಂಬಾ ಬೃಹತ್ತಾಗಿ ನಡೆಯಬೇಕು ಮತ್ತು ಅದು ಸಕಾಲದಲ್ಲಿ ನಡೆಯಬೇಕು. ನಾವು ಏನಾದರೂ ಬದಲಾವಣೆ ಕಾಣಬೇಕಾದರೆ, ನಮ್ಮ ಕೆಲಸ ಉತ್ತಮ ಮಟ್ಟದ್ದಾಗಿ ಇರಬೇಕಾಗುತ್ತದೆ. ಅದು ಸಾಕಷ್ಟು ಪ್ರಮಾಣ ಅಥವ ವ್ಯಾಪ್ತಿಯಲ್ಲಿ ಇರಬೇಕಾಗುತ್ತದೆ. ಹಾಗೂ ಸರಿಯಾದ ಸಮಯಕ್ಕೆ ನಡೆಯುವುದೂ ಮುಖ್ಯವಾಗುತ್ತದೆ.

ಆದುದರಿಂದಲೇ quantity or quality ಎಂಬುದಿಲ್ಲ. ಅದು ಇರಬೇಕಾದದ್ದು quantity and qualityಯಲ್ಲಿ! ಆಗ ಮಾತ್ರ ನಾವು ಕಂಡ ಕನಸು ನನಸಾಗಲು ಸಾಧ್ಯ. ಬದಲಾವಣೆ ನಾವು ಕಾಣಬೇಕಾದ್ರೆ ಅದು ತುರ್ತಾಗಿ ಆಗಬೇಕಾದ ಅನಿವಾರ್ಯತೆ ಬರುತ್ತದೆ. ಸಮಯ ನಮಗೆ ಕಡಿಮೆ ಇರುವುದರಿಂದ ಅದು ತಕ್ಷಣ ನಡೆಯಬೇಕಾಗುತ್ತದೆ. ಒಳ್ಳೆಯ ಕೆಲಸದ ಅಡಿಪಾಯವೇ ಈ ಮೂರು ಅಂಶಗಳು: ಗುಣಮಟ್ಟ, ಸಂಖ್ಯೆ ಮತ್ತು ಸಮಯ.

ಆ ನಿನ್ನ ನೆನಪಿನಲಿ-ಸುನೀಲ್ ಪವಾರ್



ವರ್ಷಗಳುರುಳಿದವು ಮಾಸದ ನಿನ್ನ ನೆನಪಿನಲಿ

ಭೇಟಿಯೊಂದು ಬಾಕಿಯಿದೆಯನ್ನ ಅನಿಸಿಕೆಯಲಿ,

ಹುಸಿಯಾಗಿಹುದು ನನ್ನೀ ಬಯಕೆ, ಚೂರಾದ ಹೃದಯದಿ

ಜೀವಂತವಿರುವೆ ನಾ, ನೀನಿರುವ ಭಾವನೆಯಲಿ

ಕಣ್ಣಂಚಿನ ತೇವ ಮರೆಮಾಚಿರಲು ಸಮುದ್ರದಿ

ಕಾಯುತಿಹುದು ಕಣ್ಣೀರಿನ ವರ್ಷಧಾರೆಯಲಿ

ನೀ ಮರಳಿ ಬರುವ ವಿಶ್ವಾಸದಿ

ನಾನೀರುವೆ ನಿನ್ನ ಹೃದಯದಿ

(ಉತ್ತರಖಂಡದ ಅಸೋಸಿಯೇಟ್-ಮುಕೇಶ್ ಪ್ರೇಮ್)

ಮರೆತುಬಿಡು

-ಶಿವಕುಮಾರ ಸಿ ಎಸ್

ಹೋಳಿ ಹುಣ್ಣಿಮೆಯ ದಿನ
ನೀ ನನಗೆ ಸಿಕ್ಕಿದ್ದು
ನೆನಪಿರಬಹುದು;
ಅಗೋ ಆ ಗುಡ್ಡದ ಮೇಲೆ
ಆಮೇಲೆ ಪ್ರೀತಿ-ಗೀತಿ ಇತ್ಯಾದಿ.

ನೆನಪಿದೆಯಾ ಪಾರ್ಕು?
ಬೆಳ್ಳಿಚೆಂದಿರ, ಚಿತ್ರಮಂದಿರ
ಚಿನ್ನ,ರನ್ನ, ಮುತ್ತಾದಿ ಬಿರುದುಗಳು;
ನೀ ಕೊಟ್ಟ ಮನಸು
ಹುಲ್ಲಹಾಸ ಮೇಲೆ ಕಂಡ ಕನಸು?
ನಂಬುತ್ತೇನೆ,
ಇದ್ದರೂ ಇರಬಹುದು ತಪ್ಪಿ!

ಮೊನ್ನೆ ಬಿದ್ದ ಕನಸಿನಲಿ
ನೀನಿರಲಿಲ್ಲ;
ಈಚೆಗೆ ಅದು ಮಾಮೂಲಿ
ನೀ ಕಾಣುವುದೂ ಇಲ್ಲ
ಇಲ್ಲ,
ನಾನೇ ಹುಡುಕುತ್ತಿಲ್ಲವೇನೋ!
ಅಥವಾ,
ಹುಡುಕುವುದೂ ಬೇಡವೇನೋ!

ನೀನೀಗ ಮಲಗಿರಬಹುದು?
ಮಲಗು,
ನಿಶಾಚರ ಪ್ರಾಣಿಯಂತೆ
ನಿನಗಾಗಿ ಸವೆಸಿದ
ಅದೆಷ್ಟೋ ಹಾಳೆಗಳ

ಹರಡಿಕೊಂಡು ಕೂತಿದ್ದೇನೆ ನಾನು
ಇವು ನಿನ್ನ ಬಳಿಯೂ ಇರಬಹುದು
ಅಷ್ಟು
ಇದ್ದರೆ ಭದ್ರ ಮಾಡಿಕೋ
ಕ್ಷಮಿಸು,
'ಸುಟ್ಟು ಬಿಡು' ಎನ್ನಲು ಮನಸ್ಸಿಲ್ಲ
ಮುಂದಿನವು ನನ್ನಲ್ಲಿಯೇ ಇರಲಿ.

ಅಂದಹಾಗೆ,
ಆ ಮುದುಕ ಸತ್ತುಹೋದನಂತೆ
ಅವನ ಮುಖವನ್ನೂ
ನೋಡಲಾಗಲಿಲ್ಲ ನನಗೆ;
ಸಂತೆ ಬೀದಿಯ ತುದಿಗೆ
ಕೈ ಗಾಡಿಯ ಮೇಲೆ
ನಿನ್ನಿಷ್ಟದ ಜೋಳ ತಿನ್ನುವಾಗ
ನಮ್ಮಿಬ್ಬರ ತಲೆ ಸವರುತ್ತಾ
ಅವನಾಡಿದ ಮಾತುಗಳು
ಕಿವಿಯಲ್ಲಿ ಹಾಗೆಯೇ ಇವೆ
ಅವನ್ನು ಈಗಲೇ ಮರೆತುಬಿಡು.

ಮತ್ತೆ ಆ ಮುದುಕನಿಗೊಂದು
ಘೋರಿಯ ಕಟ್ಟಿದ್ದಾರೆಂದು ಸುದ್ದಿ;
ಅದು, ನನ್ನೊಳಗೆ ನೀ ಕಟ್ಟಿದ
ಘೋರಿಗಿಂತಲೂ ದೊಡ್ಡದಂತೆ
ಅದನ್ನು ಮುಲಾಜಿಲ್ಲದೆ ಮರೆತುಬಿಡು!

ನೀನೀಗ ಕನಸು ಕಾಣುತ್ತಿರಬಹುದು
ಅದರಲ್ಲಿ ನಾನೂ ಇಲ್ಲದಿರಬಹುದು
ಗುಡ್ಡದ ಆಣೆ ಮಾಡುತ್ತಾ ಈಗ
ನನ್ನನ್ನೂ ಮರೆತುಬಿಡು ಬೇಗ!

ಸುಮ್ಮನೆ ಹಾಗೆ ಹೋಗಿದ್ದೆ ಶಾಲೆಗೆ. ನನ್ನ ಶಾಲೆಗೆ, ನಾ ಕಲಿತ ಶಾಲೆಗೆ...!-ಅವಿನಾಶ್ ಡಿ

ದ್ವಾರಬಾಗಿಲು ತೆರೆದಿತ್ತು ಬಹಳ ಬೇಗನೆ. ಬಿಳಿವಸ್ತ್ರ ಧರಿಸಿ ಕಪ್ಪು ಶೂ ಹಾಕಿ ಒಂದರಿಂದ ಎಂಟು ಹಿಂದು-ಮುಂದು ಎಣಿಸುತ್ತಾ ಕೈ-ಕಾಲು ದೇಹ ಕ್ರಮವಾಗಿ ಬಾಗಿಸುತ್ತಾ, ತಿರುಗಿಸುತ್ತಾ ಅಕ್ಕ-ಪಕ್ಕ ಪುಟ್ಟ ಹೆಜ್ಜೆಯಿಟ್ಟು ಆಯಾಸದ ಜೊತೆಗೆ ಮುಖದಲ್ಲಿ ಸ್ಮಿತಾಸಕ್ತರಾಗಿ ವ್ಯಾಯಾಮದಲ್ಲಿ ಮಗ್ನರಾಗಿದ್ದ ಆ ಮಕ್ಕಳು. ದ್ವಾರಬಾಗಿಲು ದಾಟಿ ಮುಂದಡಿಯಿಟ್ಟು ಕಣ್ಣಾಯ್ಸಿದಾಗ ನನಗಂದು ಕಲಿಸಿದವರಲ್ಲಿ ನಾಲ್ವರು ಮಾತ್ರ ಇದ್ದಾರೆ. ಕಂಡೊಡನೆ ನಗುತುಂಬಿದ ಮೊಗದಲ್ಲಿ ವಿನಯದಿ ತಲೆಬಾಗಿ ನಮಸ್ಕರಿಸಿದಾಗ ನನ್ನದೆ ಕೈ ಹಿಡಿದು ಕುಲುಕುತಿರುವಾಗ ಮನಕ್ಕಾದ ಹೆಮ್ಮೆಯ ಪರಿಯ ಉಲ್ಲಾಸಕ್ಕೆ ಸರಿಸಾಟಿಯ ಹೋಲಿಕೆಯೆ ಸರಿಸಮವಿಲ್ಲದಿಲ್ಲ. "ನನಗೊಂದು ಕೆಲಸ ಸಿಕ್ಕಿದೆ" ಹೇಳಿದೊಡನೆಯೇ ಅವರುಗಳ ಅಪ್ಪುಗೆಯ ಶುಭಾಶಯ; ಹೇಳತೀರದು

ಅವರ ಕಣ್ಣಂಚಿನ ಖುಷಿಯ. ಶಾಲೆಯಂತು ಬದಲಾಗಿದೆ ಸ್ವಲ್ಪ, ನಾ ನೆಟ್ಟಿದ್ದ ಹೊಂಗೆಯ ಮರ ಬೆಳೆದಿದೆ ಬಹಳ..! ಆದರೆ ನಾನು...? ಪ್ರಶ್ನೆಯೊಂದಿಗೆ ಕುತೂಹಲಗಳು ಹಲವು, ಮೂರ್ನಾಲ್ಕು ಚಿಕ್ಕ ಉದ್ಯಾನವನಗಳು ಅದರೊಳಗೆ ಈಗಲೂ ಇದ್ದ ಕಲ್ಲು ಬೆಂಚುಗಳು. 'ದಯವಿಟ್ಟು ನನ್ನನ್ನು ಬಳಸಿ' ಕಸದ ಡಬ್ಬದ ಮೇಲಿದ್ದ ಬರಹ ಹಾಗೆಯೇ ಇದೆ. ಅದರಿಂದ ಕಸಕ್ಕೆ ಮುಕ್ತಿ ದೊರೆತು ಪರಿಸರ ತುಂಬಾ ಸ್ವಚ್ಛವಾಗಿದೆ. ಹೊಸದಾಗೊಂದು ರಂಗಮಂಟಪ ಬಂದಿದೆ! ನಾವಂದು ಕುಣಿದಿದ್ದ ನಲಿದಿದ್ದ ಸಭೆ ಸೇರಿದ್ದ ಖಾಲಿ ನೆಲಜಾಗವೂ ಇದೆ. ಸರಸ್ವತಿ ವಿಗ್ರಹಕಿನ್ನೂ ಮೆರಗು ಬಂದಿದೆ! ಸುತ್ತಲೂ ಹೂ-ಗಿಡಗಳ ನಡುವೆ ಮೌನದಿ ವೀಣಾ ವಾದನ ನುಡಿಸಿದಂತೆ ಭಾಸವಾಗುತ್ತಿದೆ. ತರಗತಿಯಲ್ಲಿ ಮುದ್ದು ಕಂದಮ್ಮಗಳ ಪರಿಚಯವಂತು ವಿಶಿಷ್ಟವಾಗಿದೆ. ಕಥೆ ಹೇಳಿ ಚಿತ್ರ ಬಿಡಿಸುವ ಚಮತ್ಕಾರವೂ ಖುಷಿ ತಂದಿದೆ. ಹನ್ನೊಂದಾಯಿತು ಬಿಸಿಯೂಟದ ಬೆಲ್ಲು ಬಡಿಯಿತು, ಚಿಕ್ಕ ಮಕ್ಕಳ ಸೈನ್ಯ ಒಂದರ ಹಿಂದೆ ಒಂದರ ಹೆಜ್ಜೆ ಹಾಕುತ್ತಾ ಸರತಿ ಸಾಲಿಗೆ ಸೇರಿ, ಟೊಮ್ಯಾಟೋ ಬಾತ್ ತಟ್ಟೆಗೆ ಹಾಕಿಸಿಕೊಂಡು ತಮ್ಮ-ತಮ್ಮ ತರಗತಿಯ ಜಗುಲಿಯ ಮೇಲೆ ಕುಳಿತು ಸದ್ದಿಲ್ಲದೇ ತಿನ್ನುತ್ತಾ, ಜಾಸ್ತಿಯಾದ ಅನ್ನವ ಗೊತ್ತಾಗದಂತೆ ಪಕ್ಕದವರ ತಟ್ಟೆಗೆ ಹಾಕುತ್ತಾ, ಕೆಣಕುತ್ತಾ, ಬಯ್ಯುತ್ತಾ, ಆಶ್ಚರ್ಯದಿಂದ ನೋಡುತ್ತಾ ತಿಂದು ಮುಗಿಸಿ ಆಟಕ್ಕೆಂದು ಗುಂಪು-ಗುಂಪಾಗಿ ಚದುರಿದರು. ಹೊಸ ಶಿಕ್ಷಕರಿಗೆ ಪರಿಚಯ ಮಾಡಿಸಿದ ಆ ನಾಲ್ವರ ಪ್ರತಿ ಮಾತಲ್ಲೂ ಇಲ್ಲಿಯ ಹುಡುಗ, ಈ ಶಾಲೆಯಲ್ಲಿ ಓದಿದವನು, ಶಾಲೆಯ ಮೊದಲ ಮುಖ್ಯಮಂತ್ರಿಯಾಗಿದ್ದವನು, ಜಾಸ್ತಿ ಆಟವಾಡದೆ ಹಾಗೆ ಬೆಳೆದವನು, ಗಿಡ-ಮರ ಬೆಳೆಸಲು ಕೆಲವು ಸಲ ಪಾಠದ ತರಗತಿಗೆ ಚಕ್ಕರ್ ಹಾಕಿ ನೀರು ಹಾಕುತ್ತಿದ್ದವನು, ಪ್ರತಿದಿನ ಎಂಟು ಗಂಟೆಗೆ ಶಾಲಾ ಬಾಗಿಲು ತೆರೆಯಲು ಎಲ್ಲಾ ಕೀಗಳನ್ನು ಇಟ್ಟುಕೊಂಡಿದ್ದವನು. ಹೀಗೆ ಕುಶಲೋಪರಿಯೊಂದಿಗೆ ಅಂದು ನಾ ಹೇಗಿದ್ದೆನೆಂಬ ಮರು ಜ್ಞಾಪಿಸಲು ನೆರವಾಯಿತು ಅವರೊಟ್ಟಿಗೆ ಕುಳಿತು ಬಿಸಿಯೂಟ ಸವಿದ ಆ ಘಳಿಗೆ. ಮತ್ತೊಮ್ಮೆ ಬರಬೇಕೆನ್ನಿಸಿತು, ಇನ್ನೂ ಒಂದಷ್ಟು ಸಮಯ ಅವರೊಟ್ಟಿಗೆ ಕಳೆಯಬೇಕೆನ್ನಿಸಿತು. ಬರುತ್ತೇನೆ ಮತ್ತೊಮ್ಮೆ...? ಬರೆಯುತ್ತೇನೆ ಇನ್ನೊಮ್ಮೆ....!!!

What is LOVE? -Krithi Satish

Love is a feeling that binds us together with our near and dear ones. But have you ever been able to define love? I had been trying to define love all this while. But I couldn't find a proper definition. Sometimes I felt like love is being there for your loved ones. Some other time I felt that love is that strong force which makes us go on with our life when nothing is in favor to us.

I have also felt that love is a strict teacher which teaches us the life. Love may also be that deeper understanding between the individuals which helps them to understand the meaning between the lines and the untold feelings of the other. Love might turn out to be the mother of all the emotions and feelings. It might be the reason behind the tears of joy. It might also be the unbearable pain of the unheard prayers. It is also a responsibility taken up by an individual without being judgmental. A responsibility of not judging but instead helping them in lessening their flaws.

ಮೇಳವೆಂಬ ಮಹಾಸಂಕ್ರಮಣ -ಮಂಜುನಾಥ್.ಎ.ಆರ್

ಚಳಿಗಾಲ ಬಂದಾಗ 'ಎಷ್ಟು ಚಳಿ?' ಎಂದರು;

ಬಂತಲ್ಲ ಬೇಸಿಗೆ, ಕೆಟ್ಟ ಬಿಸಿಲೆಂದರು;

ಮಳೆ ಬಿತ್ತೊ, ಬಿಡದಲ್ಲ ಶನಿ! ಎಂಬ ಟೀಕೆ;

ಇವರು ಮೆಚ್ಚುವ ವಸ್ತು ಇಲ್ಲಿಲ್ಲ, ಜೋಕೆ!

ಓದಿದರ ಹೇಳುವರು; ಮತ್ತೊಮ್ಮೆ ಬರೆಯೊ!

ಬರೆದಿಡಲು ಬೆದಕುವರು; ಬರವಣಿಗೆ ಸರಿಯೋ?

ಇವರ ಬಯಕಗಳೇನೋ! ಇವರದೇ ಟೀಕೆ.

ಇವರು ಮೆಚ್ಚುವ ವಸ್ತು, ಇಲ್ಲಿಲ್ಲ, ಜೋಕೆ!

ಕೆ.ಎಸ್.ನರಸಿಂಹಸ್ವಾಮಿಯವರ ಈ ಮೇಲಿನ ಮಾತುಗಳು ಯಾರಿಗೆ ತಾನೆ ನೆನಪಾಗೋಲ್ಲ ಹೇಳಿ...! ಚಳಿಗಾಲ ಮಕ್ಕಳಿಗೆ, ದೊಡ್ಡವರಿಗೆ ಹಸಿಬಿಸಿಯ ಅಚ್ಚು, ಕಲ್ಲುಸಕ್ಕರೆ ಮೆಚ್ಚು ಎನ್ನುವಂತೆ ಇಷ್ಟವಾಗಿ ಬಿಡುತ್ತದೆ. ಮತ್ತೆ ಕೆಲವರಿಗೆ 'ಅಯ್ಯೋ! ಈ ಚಳಿಗಾಲ ಯಾವಾಗಪ್ಪಾ ಹೋಗುತ್ತೆ' ಎಂದು ಕಾಯುವವರು ಅದೇಷ್ಟೋ ಜನ. ಮೈನೆರೆಯದ ಮೈಯ ಕಾಲಕ್ಕೆ ಮೈಯೆಲ್ಲಾ ಗದಗದ ನಡುಗಿ ಬೆಂಕಿಯ ಕಾವು ಬೇಕು ಎನಿಸುತ್ತದೆ, ಹಿತವಾಗುತ್ತದೆ, ಮುದವಾಗುತ್ತದೆ. ಮೈ, ಕೈ ಉಜ್ಜುತ್ತಾ **'ಅವನ ಕೆನ್ನೆಗೆ ಇವಳ ಕೈ, ಇವಳ ಕೆನ್ನೆಗೆ ಅವನ ಕೈ'** ಹೀಗೆ ಅದೇಷ್ಟೋ ರಮ್ಯತೆ ಮಾಗದ ಮನಸ್ಸುಗಳ ಮಾಸದ ಬಾಲ್ಯ ಚಿತ್ರ ಹಸಿಹಸಿ. ಈ ಚಳಿಗಾಲದಲ್ಲಿ ಜ್ಞಾನವಿದೆ, ವಿಜ್ಞಾನವಿದೆ ಎಂಬ ತರ್ಕವೂ ಇದೆ. ಈ ನಿಲುವಿನಲ್ಲಿ ನಮ್ಮೆಲ್ಲರ ನಾಲಗೆ ಮೇಲೆ ಒಂದಿಷ್ಟು ಎಳ್ಳು-ಬೆಲ್ಲದ ಸಿಹಿತನ, ತುಂಟತನ. ಅದರಾಚೆಗಿರುವ ಸಾಮರಸ್ಯತೆಯ ಒರತೆರೊಂದಿಗಿನ ರಸತನ. ಇದು ಒಬ್ಬೊಬ್ಬರಿಗೆ ಒಂದೊಂದು ರೀತಿಯಲ್ಲಿ ವಸರುತ್ತದೆ. ಉದಾ: ಕೆಲವರಿಗೆ ತಿನ್ನೋ ಚಪಲ, ನಾಲಗೆ ಬಯಸಿದ್ದನ್ನು ತಿನ್ನುವ ಸಂಭ್ರಮದ ಹಸಿತನ. ಹಾಗೇ ಮಕ್ಕಳ ಖುಷಿಗೆ ಸುಗ್ಗಿ ಕಾಲ ಈ ಚಳಿಗಾಲದ ಪ್ರವಾಸ, ಪ್ರತಿಭಾಮೇಳ, ವಾರ್ಷಿಕೋತ್ಸವ ಅಥವಾ ಮಕ್ಕಳ ಹಬ್ಬಕ್ಕೆ ಸುಗ್ಗಿ, ರೈತ ಮಿತ್ರನಿಗೆ ಸಂಭ್ರಮದ ಸುಗ್ಗಿ ಈ ಕಾಲ ಸಗ್ಗದ ಸುಗ್ಗಿ. ಕಲಾವಿದನಿಗೆ ಯಕ್ಷಗಾನ/ ಬಯಲಾಟ/ ಸಣ್ಣಾಟ....ಆಟಗಳ ಸುಗ್ಗಿ, ಚಿತ್ರಕಾರನಿಗೆ ಚಿತ್ರ ಸಂತೆಯ ಸುಗ್ಗಿ, ವಯಿಗನಿಗೆ ಜಾತ್ರೆಯ ಸುಗ್ಗಿ ಹೀಗೆ ಎಲ್ಲರಿಗೂ ಒಂದಲ್ಲ ಒಂದು ರೀತಿಯ ಸುಗ್ಗಿ.

ಈ ಸುಗ್ಗಿ, ಜಾತ್ರೆ, ಪರಿಷೆ, ಮೇಳ ಇವೆಲ್ಲಕ್ಕೂ ಒಂದು ಹಬ್ಬದ ಸಂಬಂಧವಿದೆ ಅದು ಭಾವನಾತ್ಮಕವೂ, ಕ್ರಿಯಾತ್ಮಕವೂ ಹೌದು. ನಾನೊಬ್ಬ ಭಾಷಿಕನಾಗಿ ಈ ಕಾಲವನ್ನು ನೋಡುವುದು ಅಷ್ಟೇ ವಿಶೇಷ. ಇದಕ್ಕೆ ನನಗೆ ನೆನಪಾಗುವುದು ಸದ್ಯ **7ನೇ ತರಗತಿಯಲ್ಲಿರುವ ಪಠ್ಯಕ್ರಮ ಎ.ಆರ್.ಮಣಿಕಾಂತ್ ಅವರು ಬರೆದಿರುವ "ಸಂಕ್ರಾತಿಯಂದು ಸುಖ ದುಃಖ" ಪಾಠ**. ಇದರಲ್ಲಿ ಅವರು ಸಂಕ್ರಾಂತಿ ಹಬ್ಬದ ಗುಣ ವಿಶೇಷಗಳನ್ನು ಪರಿಚಯಿಸುತ್ತಾ, ನಮ್ಮ ಸಂಪ್ರದಾಯಗಳ ಮಹತ್ವಗಳನ್ನು ವಿಶ್ಲೇಷಿಸಿ, ವಿಮರ್ಶಿಸಿದ್ದಾರೆ. **"ರೈತ ತಾನು ಬೆಳೆದ ಫಲವನ್ನು ಗೌರವಿಸಿ, ಈ ಸಮಯದಲ್ಲಿ ಬೆಳೆಯಲು ಸಹಕಾರಿಯಾದವರಿಗೆ ಸತ್ಕರಿಸಿ, ಕೃತಜ್ಞತೆ ಹೇಳುವ ಅಮೂಲ್ಯ ಸಮಯ,**

ತಾನು ಬೆಳೆದ ಬೆಳೆಯನ್ನು ಮನೆಗೆ ತರುವ ಕಾಲ. ಈ ಕಾಲದಲ್ಲಿ ಉಪಕರಿಸಿದವರನ್ನು ಸ್ಮರಿಸಿ, ಸಂತೋಷದಿಂದ ಹರಸಿ ಬೆಳೆಯನ್ನು ಮನೆಗೆ ತರುವುದು ಈ ಕಾಲವನ್ನು ಅವರ ಒಡಹುಟ್ಟಿದವರು, ಸಂಬಂಧಿಕರು ಮತ್ತು ಸ್ನೇಹಿತರೊಂದಿಗೆ ಸಂಭ್ರಮಿಸುವ ಸುಗ್ಗಿ. ಇದಾದ ನಂತರದಲ್ಲಿ ತನ್ನ ವಿಶ್ರಾಂತ ಕಾಲವನ್ನು ರೈತ ಮನೋರಂಜನೆಯಲ್ಲಿ ಕಳೆಯುವನು".-ಇದು ಸಂಕ್ರಮಣದ ಕಾಲ.

ಮಕ್ಕಳು ಸಹ ಈ ಕಾಲದಲ್ಲಿಯೇ ಹೆಚ್ಚು ಕ್ರಿಯಾಶೀಲವಾಗಿರುತ್ತಾರೆ, ಹೆಚ್ಚು ವಿಕಾಸಶೀಲರಾಗಿರುತ್ತಾರೆ. ಈ ನೆಲೆಯಲ್ಲಿ ಶಾಲೆಯ ಪ್ರಕ್ರಿಯೆಯನ್ನು ನೋಡುವಾಗ ಮೊದಲ ಸೆಮಿಸ್ಟರ್‌ನಲ್ಲಿ ಮಕ್ಕಳಿಗೆ ಹೆಚ್ಚು ಪಠ್ಯ ಚಟುವಟಿಕೆಗಳಿಗೆ ಮಹತ್ವ ನೀಡಲಾಗಿರುತ್ತದೆ. ಎರಡನೇ ಸೆಮಿಸ್ಟರ್‌ನಲ್ಲಿ ಪಠ್ಯದ ಜೊತೆಯಲ್ಲಿ ಸಹಪಠ್ಯ/ ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊತ್ತು ನೀಡಲಾಗುತ್ತೆ, ಹಾಗಾಗಿ ಈ ಕಾಲ ಮಕ್ಕಳ ಹಬ್ಬಕ್ಕೆ ಸುಗ್ಗಿ. ಇಂತಹ ಹಬ್ಬದಲ್ಲಿ **'ಮೇಳ'** ನನಗೆ ಕುತೂಹಲವೆನಿಸಿದ **ಮಕ್ಕಳ ಹಬ್ಬ**. ಅಲ್ಲಿ ಇರುವಿಕೆಗಳು ಬಹಳ, ಕುತೂಹಲಗಳು ಅನಂತ. ಜೊತೆಗೆ ಸಾಂಸ್ಕೃತಿಕ ತಿಳುವಳಿಕೆ, ಕಲಿಕೆಯ ಅರಿವು, ಜ್ಞಾನ, ವಿಜ್ಞಾನ, ಶಾಸ್ತ್ರ, ಕ್ರೀಡೆ, ಕಲೆ - ಇತರೆಲ್ಲ ವಿಷಯಗಳ ಅರ್ಥೈಸುವಿಕೆಗೆ ಸಾಕ್ಷಿಯಾದಂತೆ ಈ ಮೇಳ ವೇದ್ಯವಾಗುತ್ತದೆ. ಇದು ಭೇಧವರಿಯದ ಕ್ರಿಯೆ, ಕಲಿಕೆಯೇ ಪ್ರಧಾನ. ಇಲ್ಲಿ ಕಲಿಯದ ಮಕ್ಕಳು, ಹಿಂದುಳಿದ ಮಕ್ಕಳು ಹಾಗೂ ಕಲಿತ ಮಕ್ಕಳು ಹೀಗೆ ಭೇಧಭಾವಗಳು ಈ ಮೇಳದ ಪ್ರಕ್ರಿಯೆಗಿರುವುದಿಲ್ಲ. ಇಲ್ಲಿ ಎಲ್ಲರೂ ಸಮಾನರೂ, ಸಮಾನವಾಗಿ, ಕಲಿಯುವ ಪ್ರಕ್ರಿಯೆಯಲ್ಲಿ ಕಲಿಯುತ್ತಾ ಸಾಗುವರು.

'ಮೇಳ' ಎಂದರೇನು? ಎಂದಾಗ ನೆನಪಾಗುವುದು ಜಾತ್ರೆ/ ಜನರಿರುವ ಗುಂಪು, ಇದರ ಮೂಲ ಸಂಸ್ಕೃತದ 'ಕುಂಭ**ಮೇಳ**'ದ ನೆಲೆಯೊಳಗೆ ಮಾತಾಡುವುದು ವಾಡಿಕೆ. ಹಾಗೆ ನೋಡಿದಾಗ ಈ ಮೇಳವು ಪ್ರಪಂಚದ ಪ್ರತಿಯೊಂದು ಆಚರಣೆಗಳನ್ನು ತನ್ನ ಸಂಭ್ರಮದ ತೆಕ್ಕೆಯಲ್ಲಿ ಮೇಳೈಸಿಕೊಂಡಿದೆ. ಅದು ಮಕ್ಕಳ ವಿಷಯದಲ್ಲಿ ಈ ಸಂಭ್ರಮ ಹೆಚ್ಚೆ ಇರುತ್ತದೆ. ಹಾಗಾಗಿ ಶಾಲೆಯಲ್ಲಿ ಮೂರು ಗುಂಪುಗಳಲ್ಲಿ ಇದು ವ್ಯಕ್ತವಾಗುತ್ತದೆ. **ಮಕ್ಕಳ ಗುಂಪು, ಶಿಕ್ಷಕರ ಗುಂಪು, ಸಮುದಾಯದ ಗುಂಪು**.

1. **ಮಕ್ಕಳ ಗುಂಪು:**

ಮಕ್ಕಳು ತನ್ನ ಗೆಳೆಯರೊಂದಿಗೆ ಬೆರೆತು ಕಲಿಯುವ, ಕಲಿತು ಕಲಿಯುವ, ಕಲೆತು ನಲಿಯುವ ಕ್ರಿಯೆ. ಇಲ್ಲಿರುವುದು ತರಗತಿಯೊಳಗಿನ ಜ್ಞಾನವನ್ನು ತರಗತಿಯೊರಗೆ ಕಲಿಯುವುದು, ಅಲ್ಲಿ ಅರ್ಥವಾಗದ್ದು, ಇಲ್ಲಿ ತಿಳಿದೀತು. ಪರಸ್ಪರರು ಸೇರಿ ಕಲಿಯುವಾಗ ಎಲ್ಲರಿಗೂ ಎಲ್ಲರು ಅರ್ಥವಾಗುತ್ತಾರೆ. ಎಲ್ಲರಿಂದ ಎಲ್ಲರು ಕಲಿಯುತ್ತಾರೆ, ಎಲ್ಲರೂ ಆತ್ಮೀಯರಾಗುತ್ತಾರೆ. **'ಇಲ್ಲಿ ಎಲ್ಲವನ್ನು ಕೊಟ್ಟು ತೆಗೆದುಕೊಳ್ಳುವ ಆಟ ನಡೆಯುತ್ತದೆ'**. ಇಷ್ಟಲ್ಲದೆ ಪ್ರತಿ ಮಕ್ಕಳ ಅಪ್ಪ-ಅಮ್ಮಂದಿರನ್ನು(ಮನೆಯವರನ್ನು) ಅರ್ಥ ಮಾಡಿಕೊಳ್ಳುವುದು ಈ ಸಂದರ್ಭದಲ್ಲಿ ಸಾಧ್ಯವಾಗುತ್ತದೆ. ಜೊತೆಗೆ ಪರಸ್ಪರರಲ್ಲಿ ಪರಿಚಯ, ಅವರ ಸುತ್ತಲೂ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಇದು ಭಾಷೆ, ಸಂಸ್ಕೃತಿಗಳ ಕೊಡುಕೊಳ್ಳುವಿಕೆಗೂ ಸಾಧ್ಯವಾಗುತ್ತದೆ. ಇಂತಹ ಮೌಲ್ಯಗಳನ್ನು ಪೋಷಕರಿಂದ ಮಕ್ಕಳೂ ಕಲಿಯಲು ಸಾಧ್ಯವಾಗುತ್ತದೆ.

2. **ಶಿಕ್ಷಕರ ಗುಂಪು:**

ಇನ್ನೊಂದು ಅಂಶವೆಂದರೆ ಕಲಿಸುವವರ ಗುಂಪು ಅದು ಶಿಕ್ಷಕಕರದ್ದು, ಇಲ್ಲಿಯೂ ಸಹ ಜ್ಞಾನ, ವಿಜ್ಞಾನ, ಭಾಷೆ, ಕಲೆ ಇಂತಹ ಅನೇಕ ವಿಷಯಗಳ ಕೊಡುಕೊಳ್ಳುವಿಕೆ, ಕಲಿತದ್ದನ್ನು ಗಟ್ಟಿಗೊಳಿಸುವಿಕೆ, ಪರಸ್ಪರತೆಯ ಮನೋಭಾವ, ಸಹಿಷ್ಣುತೆಯ ಸಾಮರಸ್ಯತೆ ಇವೆಲ್ಲವೂ ಕಲಿಸುವವರ ಗುಂಪಿನಲ್ಲಿ ಮತ್ತೆ ಮತ್ತೆ ಅರಳುತ್ತವೆ, ಕಲಿಯುತ್ತವೆ ಮತ್ತು ಗಟ್ಟಿಯಾಗುತ್ತವೆ. ಈ ಸಮಯದಲ್ಲಿ ನಡೆಯೋ ಸಾಂಸ್ಕೃತಿಕ ಚಟುವಟಿಕೆಗಳ ಸಂದರ್ಭಗಳಲ್ಲಿ ಮಕ್ಕಳ ಮತ್ತು ಪೋಷಕರ, ಸಮುದಾಯವನ್ನು ಅರ್ಥ ಮಾಡಿಕೊಂಡು ಅವರಿಗೆ ಬೇಕಾದಂತೆ ಶಿಕ್ಷಕರು ರೂಪಿಸುವ ಚಟುವಟಿಕೆಗಳಿಂದ ಅಲ್ಲಿ ಬದಲಾಗುವ ಬದಲಾವಣೆಗಳು ಪ್ರಮುಖವಾಗುತ್ತವೆ. ಇಂತಹ **'ಮಕ್ಕಳಮೇಳಗಳು ಬದಲಾವಣೆಯ ರೂವಾರಿಗಳಾಗುತ್ತವೆ'**.

೩. **ಸಮುದಾಯದ ಗುಂಪು.**

ಸಮುದಾಯ ಗಟ್ಟಿಯಾಗುವುದು ಶಾಲೆಯಲ್ಲಿಯೇ. **"ಮಕ್ಕಳೇ ಸಮುದಾಯದ ಬೆಳವಣಿಗೆಯ ಬೇರು"** ಈ ನೆಲೆಯಲ್ಲಿ ಸಮುದಾಯದವರು ಶಾಲೆಯಲ್ಲಿ ನಡೆಯುವ ಇಂತಹ ಮೇಳಗಳಲ್ಲಿ ಭಾಗವಹಿಸಿದಾಗ ಅವರಲ್ಲಿ ತರತರದ ಬದಲಾವಣೆಗಳನ್ನು ನೋಡುತ್ತೇವೆ. ಪೋಷಕರಲ್ಲಿ ಪರಸ್ಪರರ ಪರಿಚಯವಾಗುವುದು. ಪರಿಚಯದಿಂದ ಅರ್ಥ ಮಾಡಿಕೊಳ್ಳುವುದು. ನಂತರದಲ್ಲಿ ಸಹಾಯ ಮಾಡುವುದು ಇಂತವುಗಳದ್ದು ಒಂದು ನೆಲೆಯಾದರೆ. ಬದಲಾವಣೆ ಮತ್ತೊಂದು ನೆಲೆ ಅಂದರೆ ಪೋಷಕರ ಮನೆಯಲ್ಲಿ, ವರ್ತನೆಯಲ್ಲಿ ಓದುವವರ ಸಂಖ್ಯೆಯಲ್ಲಿ, ಅವರ ಜೀವನ ಶೈಲಿಯಲ್ಲಿಯೂ ಈ ಮೇಳಗಳು ಪರಿಣಾಮವನ್ನು ಬೀರುತ್ತವೆ.

ಒಂದು ಸಮಾಜದ ಬದಲಾವಣೆಗೆ ಈ ಮೂರು ಅಂಶಗಳು ಮುಖ್ಯವೆನಿಸುತ್ತವೆ. ಈ ಮೂರರ ಬೆಳವಣಿಗೆಯಿಂದ ಸಮಾಜವನ್ನು ಧನಾತ್ಮಕವಾಗಿ ಬದಲಾಯಿಸಲು ಸಾಧ್ಯವಾಗುತ್ತದೆ ಎನ್ನುದಾದರೆ **ಮೇಳ**ದ **ಗಟ್ಟಿತನ**ವನ್ನು ಮತ್ತದರ ಪರಿಣಾಮವನ್ನು ತಿಳಿಯಬೇಕಾದೀತು. ನಾನಿಲ್ಲಿ ಮೇಳದ ಸೂಕ್ಷ್ಮ ಎಳೆಯನ್ನಷ್ಟೆ ನಿಮ್ಮ ಮುಂದಿಟ್ಟಿರುವುದು ಅದರ ಆಳ, ವ್ಯಾಪ್ತಿಯನ್ನು ನೋಡುವಾಗ ಮೇಳಗಳಿಂದ ಅದೆಷ್ಟೋ ಬದಲಾವಣೆಗಳನ್ನು ತರಲು ಸಾಧ್ಯವಾಗುತ್ತದೆ ಎಂಬುದನ್ನು ನೋಡಲು ಸಾಧ್ಯವಾಯಿತು. ಇಂದಿನ ಶಾಲೆಗಳು ಬದಲಾಗಿವೆಯೆಂದರೆ ಅದು ಇಂತಹ ಮಕ್ಕಳ ಹಬ್ಬ/ ಕಲಿಕಾ ಮೇಳಗಳಿಂದ ಮಾತ್ರ. ಅದು ಈ ಮೂರು ಗುಂಪಿನವರ ಪರಿಶ್ರಮದಿಂದ ಮಾತ್ರ. ಮೇಳದಂತಹ ವೇದಿಕೆಗಳು ಮಕ್ಕಳ ಪೋಷಕರೆಲ್ಲಾ ಬೆರೆತು ಶಾಲೆಯನ್ನು, ಶಿಕ್ಷಕರನ್ನು, ಇಲಾಖೆಯನ್ನು ಹೀಗೆ ಅಲ್ಲಿರುವ ಪ್ರತಿಯೊಂದು ಅಂಶವನ್ನು ಅರ್ಥ ಮಾಡಿಕೊಂಡು. ಶಾಲೆ, ಮಗುವಿನ ಮನಸ್ಸು ವಿಕಾಸವಾಗುವ ತಪೋವನ ಎಂಬಂತೆ ಸೃಷ್ಟಿಸಲು ಈ ಮೇಳಗಳು ರೂಪುಗೊಳ್ಳಬೇಕು, ಅದರಿಂದ ಶಾಲೆಯಷ್ಟೇ ಅಲ್ಲ ಮಕ್ಕಳ ಕಲಿಕೆ, ಶಿಕ್ಷಕರ ಕಲಿಕೆ ಮತ್ತು ಸಮಾಜದ ಕಲಿಕೆಯಾಗುವ ಮೂಲಕ ಸಮಾಜದ ಬದಲಾವಣೆಯನ್ನು ಕಾಣುತ್ತೇವೆ. ಅಂತಹ ಕೆಲಸ ನಾವೆಲ್ಲರೂ ಸೇರಿ ಮಾಡಬೇಕಿದೆ, ಹಾಗೇ ಮಾಡುವ ಮನಸ್ಸುಗಳನ್ನು ಒಂದೆಡೆ ಸೇರಿಸಬೇಕಿದೆ ಅದನ್ನು ಈ ಮಕ್ಕಳ ಮೇಳಗಳು ಮಾಡುತ್ತವೆ. ಮಕ್ಕಳೇ ಈ ಮಹಾಸಂಕ್ರಮಣದ ಹರಿಕಾರರು, ಬದಲಾವಣೆಯ ನೇಕಾರರು, ಅವರನ್ನು ದೇಶ ನೇಯುವ ಕಾರ್ಯಕ್ಕೆ ಈ ಮೇಳಗಳು ಸಿದ್ಧ ಮಾಡಿದಾಗ ಮೇಳಗಳು ಸಂಕ್ರಮಣವಾಗುತ್ತವೆ.

ಜಾಹ್ನವಿ -ರಾಧಾ

ನನಗೆ ಈಕೆಯ ಪರಿಚಯವಾದದ್ದು ಆನೇಕಲ್ ತಾಲೂಕಿನ ನೆರಳೂರು ಸಮೂಹದ ಬಳಗಾರನಹಳ್ಳಿ ಶಾಲಾ ಭೇಟಿಯಲ್ಲಿ. ಜಾಹ್ನವಿ ಈ ಶಾಲೆಯಲ್ಲಿನ ಅತಿಥಿಶಿಕ್ಷಕಿಯಾಗಿ ಸುಮಾರು ಏಳುತಿಂಗಳುಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ನನ್ನ ಮೊದಲ ಶಾಲಾ ಭೇಟಿಯಿಂದಲೂ ಸಹ ಆಕೆಯ ಮುಖದಲ್ಲಿ ಅದೇನೊ ಆತಂಕ, ಬೇಜಾರು. ಆಕೆಯ ಮುಖದಲ್ಲಿ ನಗುವೇ ಬಹಳ ಅಪರೂಪ. ನಕ್ಕರು ಸಹ ಬಹಳ ಕೃತಕವೇನೋ ಅನ್ನುವ ಹಾಗೆ ಭಾಸವಾಗುತ್ತಿತ್ತು. ಮತ್ತೆರಡು ಬಾರಿ ಭೇಟಿಯಾದಗಲು ಜಾಹ್ನವಿ ಹಾಗೆ ಇದ್ದರು. ನಾನು ಎರಡನೇ ಬಾರಿ ಭೆಟಿಯಾದಾಗ 'ಯಾಮಿನಿ ಪಾಟೀಲ್' ಅವರ "ಅನುನಯದಿಂದ ಸ್ವನಿಯಂತ್ರಣವನ್ನು ಹೇಳಿಕೊಡುವುದು ಹೇಗೆ?" ಎಂಬ ಲೇಖನದ ಮೇಲೆ ಇತರ ಶಾಲಾ ಶಿಕ್ಷಕರೊಡನೆ ಜಾಹ್ನವಿಯೂ ಚರ್ಚೆಯಲ್ಲಿ ಆಸಕ್ತಿಯಿಂದ ತೊಡಗಿದ್ದರೂ ಕೂಡ ತುಂಬಾ ಸಂಕೋಚ ಮತ್ತು ಹಿಂಜರಿಕೆಯಿಂದಲೇ ಮಾತನಾಡುತ್ತಿದ್ದರು.

ನನ್ನ ಮೂರನೆಯ ಶಾಲಾಭೇಟಿಯಲ್ಲಿ ಜಾಹ್ನವಿ ಶಾಲೆಯಲ್ಲಿರಲಿಲ್ಲ. ಮುಖ್ಯಶಿಕ್ಷಕಿಯವರ ಬಳಿ ವಿಚಾರಿಸಿದಾಗ ಆಕೆ ಮತ್ತು ಅವರ ಗಂಡನಿಗೆ ಅಪಘಾತವಾಗಿದ್ದರ ಸಂಪೂರ್ಣ ಮಾಹಿತಿ ನೀಡಿದರು. ಕಳೆದ 10 ದಿನಗಳ ಹಿಂದೆ ಜಾಹ್ನವಿಯವರ ಸ್ಕೂಟರ್ ಮತ್ತು ಲಾರಿ ನಡುವೆ ಸಂಭವಿಸಿದ ಅಪಘಾತದಲ್ಲಿ ಜಾಹ್ನವಿ ತಲೆಗೆ ಆಳವಾದ ಗಾಯವಾಗಿ 10 ಹೊಲಿಗೆ ಹಾಕಲಾಗಿದೆ. ಮತ್ತವರ ಗಂಡನ ಕಾಲಿಗೂ ಸಹ ಬಲವಾದ ಗಾಯವಾಗಿದೆ.

ಅಪಘಾತ ಮಾಡಿದ ಲಾರಿಯವನು ಹಿಂತಿರುಗಿ ಕೂಡ ನೋಡದೆ ಹೋಗಿದ್ದ. ಯಾರೋ ಸ್ಥಳಿಯರು ಇವರಿಬ್ಬರನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ. ಆದರೆ ಆಸ್ಪತ್ರೆಯ ಖರ್ಚನ್ನು ಬರಿಸಲಾರದೆ ಬಹಳ ಬೇಗ ಅಲ್ಲಿಂದ ಹೊರಬಂದಿದ್ದಾರೆ! ಏಕೆಂದರೆ ಕಳೆದ ಏಳು ತಿಂಗಳಿಂದ ಜಾಹ್ನವಿಗೆ ಸರ್ಕಾರವು ಸಂಬಳವನ್ನೇ ನೀಡಿಲ್ಲ. ಮತ್ತೆ ಆಕೆಯ ಪತಿಗೆ ಬರುತ್ತಿದ್ದ ಅಲ್ಪ ಸಂಬಳದಲ್ಲೇ ಜೀವನ ನಡೆಯುತ್ತಿತ್ತು. ಈಗ ಪರಿಸ್ಥಿತಿ ಇನ್ನೂ ಹದಗೆಟ್ಟಿದೆ. ಏಕೆಂದರೆ ಜಾಹ್ನವಿಯ ಗಂಡನ ಕಾಲಿಗೆ ಪೆಟ್ಟಾಗಿರುವುದರಿಂದ ಅವರು ಕೆಲಸಕ್ಕೆ ಹೋಗುತ್ತಿಲ್ಲ. ಮತ್ತೊಂದು ವಿಚಾರವೆಂದರೆ ಸುಮಾರು ಮೂರು ವರ್ಷದಿಂದ ಮಕ್ಕಳಿರದ ಜಾಹ್ನವಿ ಅಪಘಾತಕ್ಕೆ ಮುಂಚೆ ಗರ್ಭಿಣಿಯಾಗಿದ್ದಾರೆ. ಅಪಘಾತದ ೮ ದಿನಗಳ ನಂತರ ಆಕೆಗೆ ರಕ್ತಸ್ರಾವ ಕಾಣಿಸಿಕೊಂಡಿದೆ. ಇದನ್ನು ವೈದ್ಯರಲ್ಲಿ ತೋರಿಸಿ ಚಿಕಿತ್ಸೆ ಪಡೆಯಲು ಸಹ ಜಾಹ್ನವಿಯ ಬಳಿಯಲ್ಲಿ ಹಣವಿಲ್ಲ. ಜಾಹ್ನವಿಯ ತಂದೆ-ತಾಯಿಯರು ಸ್ಥಿತಿವಂತರಲ್ಲ. ಇಲಾಖೆಗೆ ಎಷ್ಟು ಬಾರಿ ಸಂಬಳದ ವಿಷಯವಾಗಿ ಪತ್ರ ಬರೆದರೂ ಪ್ರಯೋಜನವಾಗಲಿಲ್ಲ. ಹಾಗಾಗಿ ಶಾಲಾ ಶಿಕ್ಷಕರು ಮತ್ತು ಸಿ.ಆರ್.ಪಿ ಯವರ ಧನಸಹಾಯದಿಂದ ಆಕೆ ಆಸ್ಪತ್ರೆಗೆ ತೆರಳಿದ್ದರು. ನಾನು ಶಾಲೆಯಲ್ಲೇ ಇರಬೇಕಾದರೆ ಜಾಹ್ನವಿ ಆಸ್ಪತ್ರೆಯಿಂದ ನೇರ ಶಾಲೆಗೆ ಬಂದರು. ಆಕೆ ಮೊದಲಿಗಿಂತಲೂ ತುಂಬ ಕಳಾಹೀನರಾಗಿದ್ದರು. ಆಕೆಯ ಹಣೆಯ ಮೇಲೆ ಬಿದ್ದ ಗಾಯದ ಗುರುತು, ತಲೆಯಲ್ಲಿ ಇನ್ನೂ ಮಾಯದ ಗಾಯ. ಅದರಲ್ಲಿ ಗಾಯದ ಮೇಲೆ ಬರೆ ಎಳೆದಂತೆ ಇನ್ನೊಂದು ಆಘಾತವೆಂದರೆ ವೈದ್ಯರ ಹೇಳಿಕೆ 'ಆಕೆಗೆ ಗರ್ಭಪಾತವೊಂದೆ ಉಳಿದಿದ್ದ ದಾರಿ'. ಮಗುವಿನ ಬೆಳವಣಿಗೆ ಸರಿಯಾಗಿರದ ಕಾರಣ ವೈದ್ಯರು ಗರ್ಭಪಾತಕ್ಕೆ ಸೂಚಿಸಿದ್ದರು. ಇದಕ್ಕೂ ಸಹ ಆಕೆಗೆ ಹಣದ ಅವಶ್ಯಕತೆಯಿದೆ. ಆಕೆಯ ಆರೋಗ್ಯ ಗಮನಿಸಲು ಸಹ ಯಾರು ಇಲ್ಲ. ಈ ಆರ್ಥಿಕ ಪರಿಸ್ಥಿತಿ ಕೇವಲ ಜಾಹ್ನವಿಯದು ಮಾತ್ರವಲ್ಲ, ಅವರ ಹಾಗೆ ಸರ್ಕಾರಿ ಶಾಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬಹಳಷ್ಟು ಅತಿಥಿ ಶಿಕ್ಷಕರದ್ದು ಚಿಂತಾಜನಕವೆ. ನನ್ನ ಶಾಲಾ ಭೇಟಿಯಲ್ಲಿ ಗಮನಿಸಿದ ಹಾಗೆ ಬಹಳಷ್ಟು ಅತಿಥಿ ಶಿಕ್ಷಕರು ಪ್ರತಿದಿನ ಬಸ್ ಪ್ರಯಾಣ ದರಕ್ಕೂ ಕೂಡ ಎಣಗಾಡುವ ಪರಿಸ್ಥಿತಿ ನೋಡಿದ್ದೇನೆ. ಈ ಜನವರಿ ತಿಂಗಳಿಂದ ಬಹಳಷ್ಟು ಅತಿಥಿ ಶಿಕ್ಷಕರು ಶಾಲೆಗೆ ಬರುವುದನ್ನೇ ನಿಲ್ಲಿಸಿದ್ದಾರೆ. ಶಾಲೆಯಲ್ಲಿ ಶಿಕ್ಷಕರ ಕೊರತೆಯನ್ನೇನೋ ನೀಗಿಸಲು ಬಹಳ ಬೇಗ ಅತ್ಯಲ್ಪ ಖರ್ಚಿನಲ್ಲಿ ಅತಿಥಿ ಶಿಕ್ಷಕರ ನೇಮಕ ಮಾಡಿಕೊಳ್ಳುವ ಇಲಾಖೆ ಅಷ್ಟೇ ಬೇಗ ಅವರ ತಿಂಗಳ ಸಂಬಳ ಕೊಟ್ಟರೆ ವಾಸಿ. ಏಕೆಂದರೆ ಅತಿಥಿ ಶಿಕ್ಷಕರಾಗಿ ಕೆಲಸ ಮಾಡುವ ಬಹಳಷ್ಟು ಮಂದಿ ಆರ್ಥಿಕವಾಗಿ ಮುಗ್ಗಟ್ಟಿನ ಸ್ಥಿತಿಯಲ್ಲೇ ಇರುತ್ತಾರೆ. ಸರ್ಕಾರದ ಬೇರಾವ ಸವಲತ್ತು ನೀಡದೇ ಇದ್ದರೂ ಅವರ ತಿಂಗಳ ಸಂಬಳ ಕೊಟ್ಟಿದ್ದರೆ ಜಾಹ್ನವಿಯ ಆರ್ಥಿಕ ಪರಿಸ್ಥತಿ ಇವತ್ತು ಹೀಗಿರುತ್ತಿರಲಿಲ್ಲ ಎಂಬುದು ನನ್ನ ಅಭಿಪ್ರಾಯ.

Not unless you are me… -Rajani Bhat

Wear a Saree, its traditional, they say.
Don't wear western dresses, people ogle, they say.
Do earn money for the family, they say, don't do a job, they say.
Be independent, they say, listen to what we say, they say.

We have definitely come a long way from being cooped up at home, being confined to kitchens, feeding extended family, bearing numerous children and being deprived of every basic rights. Now we get to go to school, get a job we desire and definitely we have a strong support system in our family and friends. But even then, the blabbering mouths and roaming eyes never stop judging us.

No matter how much we are ‘Empowered’, no matter the freedom we are given, it is still expected of us to be within ‘Boundaries’. The boundaries set for us by the wagging mouths around us. They let us study, but expect us to listen to parents and relatives when we want to find a job. They let us work, But expect us to ask Husband’s and In-Law’s permission for the same when we get married. They let us wear what we like, be it traditional or western but never fail to find flaws in our choices. *“ಅವಳು ನೋಡು ಗೌರಮ್ಮನ ತರಹ ಡ್ರೆಸ್ ಮಾಡ್ಕೊಂಡು ಬಂದಿದಾಳೆ”, “ಅಬ್ಬಾ..! ನೋಡು ಗಂಡ್‌ಬೀರಿ ತರಹ ಪ್ಯಾಂಟ್‌ಶರ್ಟ್ ಹಾಕಿದಾಳೆ, ನಾಚಿಕೆ ಇಲ್ಲದೇ ಇರೋಳ್ ತರ ತುಂಡ್ ತುಂಡ್ ಬಟ್ಟೆ ಹಾಕಿದಾಳೆ”.* for any attire we wear. It does not matter what we wear is decent. Such people have criticism for everything we wear and words to brand us. And to think about when we go out with someone! O Heavens! It does not matter if we are with our boy-friend, friend or brother or Father. She is with a Boy/man so she is a bad example to Young kids.

We are judged for everywhere we go, with who so ever we go, judged for whatever we do, we are judged for everything we think, we are judged for everything we wear, we are even judged for our body types, food habits without an ounce of consideration about how we feel. We are also humans, we too have emotions and have our own thoughts. Our feelings, our emotions and the compromises we make are more often than not, goes unsaid, unnoticed, unfeelingly tossed aside.

But our lives are ours. Yes it is inter linked and interdependent with others but never expendable. Try one day walking in the shoes of your beloved, mother, sister, daughter, wife or friend. You will know what she faces everyday yet how she walks with head held high, with a smile on her face hiding sorrow, working tirelessly for the family she is born to and the family she steps into; for her children she raises and expects nothing from anyone she calls her own. Why do you want to confine us? Why do you want to judge us? Why do you want to set boundaries? Why do you want to make decisions for us? YOU have no right. We are the ones who gets to decide what we want from our life. We are the ones who gets to choose. We are the ones who gets to define our life, our jobs and interests. NOT YOU. Not anyone. I own my life, my decisions, my mistakes and choices. And YOU don’t get to define what I have to be. NOT unless YOU are ME.

ಶಿಕ್ಷಣ -ನಂದೀಶ್ ಕುಮಾರ್ ಎಂ ಕೊಪ್ಪಳ

ಶಿಕ್ಷಣ ಶಿಕ್ಷಣ ಮಕ್ಕಳ ಶಿಕ್ಷಣ
ಶಾಲೆಯೆಂಬ ಗೂಡಿನಲ್ಲಿ
ನವ ಚೈತನ್ಯದ ಶಿಕ್ಷಣ
ಕನಸಿನ ಕಲ್ಪನೆಯನ್ನು
ನನಸಾಗಿಸುವ ಶಿಕ್ಷಣ
ಸ್ವಾತಂತ್ರ್ಯದ ಬೆಳಕಿನಲ್ಲಿ
ಪ್ರಕಾಶಿಸುವ ಶಿಕ್ಷಣ
ಹೊಸ ಗಾಳಿ ಹೊಸ ಬೆಳಕಿನಲ್ಲಿ
ಹೊಸ ಚಿಂತನಯ ಶಿಕ್ಷಣ
ನಲಿಕಲಿಯ ಭಾವದಲ್ಲಿ
ನಲಿದಾಡುವ ಶಿಕ್ಷಣ
ಸ್ವಕಲಿಕೆ ಸ್ವಅನುಭವದ
ಸ್ವಾಭಾವಿಕ ಶಿಕ್ಷಣ
ಮತ ಧರ್ಮದ ಹಂಗಿಲ್ಲದ

ಕಲಿಯುವ ಕಲಿಸುವ
ಕ್ರಿಯಾತ್ಮಕವಿ ಶಿಕ್ಷಣ
ವಿದ್ಯಾರ್ಥಿಯ ಪರಿಸರದ
ಅನುಭವಗಳ ಶಿಕ್ಷಣ
ಮರೆಯದಿರಿ ಇದುವೆ
ಮಗು ಕೇಂದ್ರಿತ ಶಿಕ್ಷಣ

ಮನುಜ ಪಥದ ಶಿಕ್ಷಣ
ಶಿಕ್ಷೆ ಸಂಕಟವಿಲ್ಲದ
ಸಂಭ್ರಮದ ಶಿಕ್ಷಣ
ಉತ್ಸಾಹದ ಉನ್ಮಾನದ
ಉಜ್ವಲವಿ ಶಿಕ್ಷಣ

|| सुकून || - Supriya Narayanakar

" फूलों की चादर जैसी कोमल तुम्हारी गोदी में सोने का सुकून,

माँ, नहीं मिलता किसी मखमली बिस्तरों में ऐसा सुकून।

मेरे साथ हमेशा रहती हैं मेरी सखियां,

पर रातों में माँ, तुम्हारी यादों से भीग जाती हैं तकिया । "

ತುಂತುರು –ರಕ್ಷಿತ್ ಕೊಟ್ಟೂರು

ಮಳೆಹನಿಯ ಮುತ್ತಿನ ಹಾರ ಮುಗಿಲಿನಿಂದ ಜಾರಿ

ಹಸಿರಾಗಿ ನಿಂತಿತ್ತು ನಾ ಬರುವ ದಾರಿ

ಮಳೆಯಲ್ಲಿ ನೆನೆದು ಮರದ ನೆರಳಲ್ಲಿದ್ದಳೂ ಅವಳು

ಕೊಡೆ ಹಿಡಿದ ನಾ ಕೋರಿದೆ ಅವಳು ನನ್ನೊಂದಿಗೆ ಬರಲು

ಚಪ್ಪಲಿಯ ತೆಗೆದು ಕೈಯಲ್ಲಿ ಹಿಡಿದು ನೋಡಿದಳು ನನ್ನೆ

ಆ ನೋಟದಲೇ ಏಟು ಬೀಳುವ ಸೂಚನೆ ಕೊಟ್ಟಿತು ಕೆನ್ನೆ

ತಪ್ಪೇನಾದರೂ ಆಯಿತೆ..? ನಡುಗುತ್ತಾ ನಾನುಡಿದೆ

ನಸುನಕ್ಕು ಅವಳೆಂದಳು ಚರ್ಮದ ಚಪ್ಪಲಿ ಹಾಳಾಗುವುದೆಂದು ತೆಗೆದೆ.

*****

ಭಾವನೆಗಳ ಕಡಲಲ್ಲಿ ಬಹುದೂರ ನಿನ್ನೊಡನೆ ಈಜಿದ ಮೇಲೆ

ಬದಲಾವಣೆಯ ಸುಳಿಗೆ ಸಿಲುಕಿದೆ ನಾನು

ನಾ ಮುಳುಗುವುದ ಕಂಡು ಬಿಕ್ಕಳಿಸಿ ಅತ್ತು

ನನ್ನೆಡೆಯ ಒಲವನ್ನು ಕೊಂದೆ ನೀನು.

ಮತ್ತಾವುದೊ ದೂರತೀರದಲ್ಲಿ ನಿಟ್ಟುಸಿರನುಸುರಿ ನಾ ಎದ್ದೆ

ಕಾಲದ ಆ ಕಡಲ ಕಾಣದ ತೀರದಲ್ಲಿ ನೀನಿದ್ದೆ

ಅದಷ್ಟೊ ಮಳೆ-ಮಂಜುಗಳು ಸಾಕ್ಷಿಯಾದವು ಈ ಒಂಟಿತನಕೆ

ಬದಲಾವಣೆಗಳೆಲ್ಲ ಕರಗಿ ಮನದಲ್ಲಿ ಮತ್ತದೇ ಬಯಕೆ.

ಕನ್ನಡಿಯ ಬಿಂಬವ ನೋಡಿ ಬದಲಾವಣೆಯ ಏನಿರಬಹುದೆಂದು ಹುಡುಕಿದೆ

ಉತ್ತರ ಸಿಗದೆ ಮತ್ತದೇ ನೆನೆಪನ್ನು ಕೆದಕಿದೆ

ಇಂದು ನೀ ಬಂದೆ ನಾನಿದ್ದ ತೀರಕ್ಕೆ

ಆದರೆ ರೆಕ್ಕೆ ಬಲಿತ ನಿನ್ನ ಭಾವನೆಯ ಹಕ್ಕಿಗಿಂದು ಮತ್ತ್ಯಾರದೋ ತೆಕ್ಕೆ.

In the Name of Development -sanjay

In Simple words, the word development can be defined as an event constituting a new stage in a changing situation.

Development is essential for every being but development is not purely an economic phenomenon. It is rather a multi-dimensional process. In today's times do we understand the concept of development in its full meaning or are we obsessed about material benefits and success? We propound that man is a social animal. How do we understand this? Is it because human kind is socially matured and tends to live with its own kind without much difficulty? If man is a social animal then there must have been agreements about every view in the society. These are few serious questions to be thought about. In my understanding, human beings are social and they are critical beings that make them different from other species in the world. Any person can easily criticize anybody when he or she feels the need to do it. So now we need to land on the theory of Subjectivity. We often relate to others when we feel compatible. At the same time a person also wants to remain unique and different. In my view, this is the most indispensable character of a human being because any person has the power to both reason and reflect. Individualistic experiences and thoughts are valid and necessary for the society.

